## ಲಕ್ಷಾನಟ್ಟಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ, ಸಂತಸ ವ್ಯಕ್ತಪಡಿಸಿದ ಎಸ್.ಡಿ.ಎಂ.ಸಿ ಮತ್ತು ಶಿಕ್ಷಕವೃಂದ

# ಪ್ರತಿಭಾ ಕಾರಂಜಿಯಲ್ಲಿ ವಿದ್ಯಾರ್ಥಿಗಳ ಉತ್ತಮ ಸಾಧನೆ



**ಲೋಕಾಪುರ :** ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಮುಧೋಳ ಹಾಗೂ ಸಮೂಹ ಸಂಪನ್ಮೂಲ ಕೇಂದ್ರಲಕ್ಷಾನಟ್ಟಿ ಮತ್ತು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಜಾಲಿಕಟ್ಟಿ ಇವರ ಸಹಯೋಗದಲ್ಲಿ ನಡೆದ 2024–25ನೇ ಸಾಲಿನ ಲಕ್ಷಾನಟ್ಟಿ ಕ್ಲಸ್ಟರ್ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢ ವಿಭಾಗದ ಪ್ರತಿಭಾ ಕಾರಂಜಿಯಲ್ಲಿ ಪಟ್ಟಣದ ಲಕ್ಷಾನಟ್ಟಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳು ಪಟ್ಟಣದ ವಿವಿಧ ಸ್ಪರ್ದೆಗಳಲ್ಲಿ ಭಾಗವಹಿಸಿ ಪ್ರಥಮ, ದ್ವಿತಿಯ ಹಾಗೂ ತೃತೀಯ ಸ್ಥಾನ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ ಎಂದು ಮುಖ್ಯ ಗುರುಮಾತೆ ವ್ಹಿ. ಹೆಚ್. ಹಿರೇಮಠ ತಿಳಿಸಿದ್ದಾರೆ.

4ನೇ ತರಗತಿಯ ಸಹನಾ ಭಜಂತ್ರಿ ಧಾರ್ಮಿಕ ಪಠಣ ಪ್ರಥಮ, ಭಕ್ತಿಗೀತೆ ದ್ವಿತೀಯ, ಇಂಗ್ಲೀಷ ಕಂಠಪಾಠ ತೃತೀಯ, 5ನೇ ತರಗತಿಯ ಭಾಗ್ಯಾ ನ್ಯಾಮಗೌಡ ಅಭಿನಯ ಗೀತೆ ದ್ವಿತೀಯ, 2ನೇ ತರಗತಿಯ ದೀಪಾ ಕಂಬಾರ ಅಭಿನಯ ಗೀತೆ ತೃತೀಯ, 4ನೇ ತರಗತಿಯ ಕಾವ್ಯಾ ಬಡಿಗೇರ ದೇಶಭಕ್ತಿಗೀತೆ ತೃತೀಯ, 4ನೇ ತರಗತಿಯ ಅಶ್ವಿನಿ ಲಮಾಣಿ ಛದ್ಮವೇಷ ತೃತೀಯ, 6ನೇ ತರಗತಿಯ ಪವನ ಹಡಪದ ಚಿತ್ರಕಲೆ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಶಿಕ್ಷಕರಾದ ಎಫ್. ಆರ್. ಐನಾಪೂರ, ವ್ಹಿ. ವೈ. ಪಾಟೀಲ, ವೀಣಾ ಮುದಯ್ಯಗೋಳ ಮತ್ತು ಎಸ್.ಡಿ.ಎಂ.ಸಿ ಅಧ್ಯಕ್ಷರು ಹಾಗೂ ಸರ್ವಸದಸ್ಯರು ಶಿಕ್ಷಕವೃಂದ ಸಂತಸ ವ್ಯಕ್ತಪಡಿಸಿದ್ದಾರೆ.

# ಸೆಪ್ಟೆಂಬರ ಮಾಹೆಯ ಪಡಿತರಧಾನ್ಯ ವಿತರಣೆ

**ಬಾಗಲಕೋಟೆ :** ರಾಷ್ಟ್ರೀಯ ಆಹಾರ ಭದ್ರತಾ ಹಾಗೂ ಪಿಎಂಜಿಕೆಎವೈ ಯೋಜನೆಯಡಿ ಸೆಪ್ಟೆಂಬರ–2024ರ ಮಾಹೆಗೆ ಚಾಲ್ತಿಯಲ್ಲಿರುವ ಪಡಿತರ ಚೀಟಿದಾರರಿಗೆ ಪಡಿತರಧಾನ್ಯವನ್ನು ಬಿಡುಗಡೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದ್ದಾರೆ.

ಅಂತ್ಯೋದಯ ಕಾರ್ಡದಾರರಿಗೆ ಪ್ರತಿ ಪಡಿತರ ಚೀಟಿಗೆ 21 ಕೆಜಿ ಅಕ್ಕಿ ಹಾಗೂ 14 ಕೆಜಿ ಜೋಳ ಸೇರಿ ಒಟ್ಟು 35 ಕೆಜಿ ಆಹಾರಧಾನ್ಯವನ್ನು ಉಚಿತವಾಗಿ ನೀಡಲಾಗುತ್ತಿದೆ. ಬಿಪಿಎಲ್ ಮತ್ತು ಆದ್ಯತಾ ಪಟಿತರ ಚೀಟಿದಾರರಿಗೆ ಪ್ರತಿ ಸದಸ್ಯರಿಗೆ 3 ಕೆಜಿ ಅಕ್ಕಿ, 2 ಕೆಜಿ ಜೋಳ ಸೇರಿದಂತೆ ಒಟ್ಟು 5 ಕೆಜಿ ಆಹಾರಧಾನ್ಯವನ್ನು ಉಚಿತವಾಗಿ ನೀಡಲಾಗುತ್ತಿದೆ. ಒನ್ ನೇಷನ್ ಒನ್ ರೇಷನ್ ವ್ಯವಸ್ಥೆಯಡಿ ಅಂತರರಾಜ್ಯ ಫಲಾನುಭವಿಗಳು ಪಡಿತರವನ್ನು ಪ್ರತಿ ಸದಸ್ಯರಿಗೆ 5 ಕೆಜಿ ಉಚಿತವಾಗಿ ನೀಡಲಾಗುತ್ತದೆ.

ಈ ಮಾಹೆಯಲ್ಲಿ ಪ್ರಾರಂಭದಿಂದ ತಿಂಗಳ ಕೊನೆಯವರೆಗೆ ಬೆಳಿಗ್ಗೆ 8 ರಿಂದ ರಾತ್ರಿ 8 ವರಗೆ ಪಡಿತರ ವಿತರಣೆ ಕಾರ್ಯ ಜರುಗಲಿದೆ. ತಮಗೆ ಹಂಚಿಕೆ ಮಾಡಿದ ಆಹಾರಧಾನ್ಯವನ್ನು ಕಳಸಂತೆಯಲ್ಲಿ ಮಾರಾಟ ಮಾಡಿದರೆ ಅಂತಹವರ ಪಡಿತರ ಚೀಟಿಯನ್ನು ರದ್ದುಪಡಿಲು ಕ್ರಮವಹಿಸಲಾಗುವುದು. ಕಾಳಸಂತೆಯಲ್ಲಿ ಅನಧಿಕೃತ ಆಹಾರಧಾನ್ಯ ದಾಸ್ತಾನು ಮಾಡುವವರ ವಿರುದ್ದ ಕ್ರಮಜರುಗಿಸಲಾಗುವುದು. ಈ ಬಗ್ಗೆ ದೂರುಗಳಿದ್ದಲ್ಲಿ ಸಂಬಂಧಿಸಿದ ತಹಶೀಲ್ದಾರ ಕಚೇರಿ ಅಥವಾ ಆಹಾರ ಇಲಾಖೆಯ ಜಂಟಿ ನಿರ್ದೇಶಕ ಕಚೇರಿಗೆ ಸಲ್ಲಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

# ತಪಸ್ಸು ಮಾಡುವುದರಿಂದ ಇಂದ್ರಿಯಗಳು ಸ್ವಚ್ಛವಾಗುತ್ತದೆ: ರಾಮಾನಂದ ಮಹಾಸ್ವಾಮಿಜಿ





**ಬೀಳಗಿ :** ಮನಷ್ಯನಿಗೆ ಸುಖ, ಸಂತೋಷ ದೊರೆಯಬೇಕಾದರೆ ಹಗಲು, ರಾತ್ರಿಯನ್ನದೆ ಭಗವಂತನ ನಾಮಸ್ಮರಣೆ ಮಾಡಬೇಕು. ತಪಸ್ಸು ಮಾಡುವುದರಿಂದ ಇಂದ್ರಿಯಗಳು ಸ್ವಚ್ಛವಾಗುತ್ತದೆ. ಪ್ರತಿಯೊಬ್ಬರು ತಮ್ಮ ಸ್ವರೂಪವನ್ನು ಅರಿತುಕೊಳ್ಳಬೇಕು ಎಂದು ತುಳಸಿಗೇರಿ ಮಹಾಮುನಿ ಆಶ್ರಮದ ರಾಮಾನಂದ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ಅರಕೇರಿ ಗ್ರಾಮದಲ್ಲಿ ಹಿಂದುಗಳ ಪವಿತ್ರ ಮಾಸ ಶ್ರಾವಣ ಮಾಸದ ಮಂಗಳವಾರ ಲೋಕ ಕಲ್ಯಾಣಾರ್ಥವಾಗಿ ಬೊಮ್ಮಲಿಂಗೇಶ್ವರ ಆಶ್ರಮದ ಪೀಠಾಧಿಕಾರಿ ಬ್ರಹ್ಮಲಿಂಗ ಸ್ವಾಮಿಗಳು ಒಂದು ತಿಂಗಳವರೆಗೆ ಕೈಗೊಂಡ ಮೌನಾನುಷ್ಠಾನ ಮಹಾಮಂಗಲ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಜನ ಕಲ್ಯಾಣಕ್ಕಾಗಿ ಬ್ರಹ್ಮಲಿಂಗ ಮಹಾಸ್ವಾಮಿಗಳು ಜಾತಿ ಬೇಧವಿಲ್ಲದೇ ಎಲ್ಲರಲ್ಲೊಂದಾಗಿ ಅಪಾರ ಭಕ್ತ ಸಮೂಹ ರೂಪಿಸಿಕೊಂಡು ಸಮಾಜದ ಒಳಿತಿಗಾಗಿ ನಿರಂತರ ಶ್ರಮಿಸುತ್ತಿರುವರು. ಶ್ರಾವಣ ಮಾಸದಲ್ಲಿ ಲೋಕ ಕಲ್ಯಾಣಾರ್ಥವಾಗಿ ಮೌನಾನುಷ್ಠಾನ ವೃತ ಆಚರಣೆ ನಡೆಸಿ ಭಕ್ತರಿಗೆ ಶಕ್ತಿ, ಭಕ್ತಿ ಕರುಣಿಸಲು ಮೌನಾನುಷ್ಠಾನ ಕೈಂಗೊಂಡಿರುವರೆಂದರು.

ಕೌದೇಶ್ವರ ಮಠದ ಮಾಧವಾನಂದ ಸ್ವಾಮೀಜಿ ಮಾತನಾಡಿ, ತಪಸ್ಸು, ಮೌನಾನುಷ್ಠಾನ ಬಹಳ ಕಠಿಣವಾದದ್ದು. ಎಲ್ಲರಿಗೂ ಮಾಡಲು ಸಾಧ್ಯವಿಲ್ಲ. ಯಜ್ಞ, ದಾನ, ತಪಸ್ಸು ಎಲ್ಲರೂ ಮಾಡಬಹುದು. ನಮ್ಮನ್ನು ನಾವು ಉದ್ದಾರ ಮಾಡಿಕೊಳ್ಳಲು ಭಗವಂತನ ನಾಮಸ್ಮರಣೆ ಮಾಡಬೇಕು. ಸತ್ಯವನ್ನು ಮಾತನಾಡುವುದು ಒಂದು ತಪಸ್ಸು. ಧರ್ಮದಿಂದ ನಡೆದರೆ ಜನುಮ ಪಾವನಾಗುತ್ತದೆ ಎಂದು ಹೇಳಿದರು.

ಬಾಡಗಿ–ಅರಕೇರಿ ಬಕ್ಕೇಶ್ವರ ಮಠದ ಬಕ್ಕಯ್ಯ ಮಹಾಸ್ವಾಮೀಜಿ ಮಾತನಾಡಿ, ಭಕ್ತಾದಿಗಳ ಉದ್ಧಾರಕ್ಕಾಗಿ ಬ್ರಹ್ಮಲಿಂಗ ಸ್ವಾಮಿಗಳು ಕಠಿಣವಾದ ಮೌನಾನುಷ್ಠಾನ ಮಾಡಿರುವರು ಎಂದು ಹೇಳಿದರು.

ಇಳಿಯಾಳದ ಗಣೇಶ ಹೊರಪೇಟ ಮಾತನಾಡಿ, ದೀಪ ತನ್ನನ್ನು ತಾನು ಸುಟ್ಟುಕೊಂಡು ಬೆಳಕು ಕೊಟ್ಟಂತೆ ಬ್ರಹ್ಮಲಿಂಗ ಮಹಾಸ್ವಾಮಿಗಳು ಲೋಕ ಕಲ್ಯಾಣಾರ್ಥವಾಗಿ 31 ದಿವಸ ಮೌನಾನುಷ್ಠಾನ ಮಾಡಿದ್ದಾರೆಂದು ಹೇಳಿದರು.

ಇದಕ್ಕೂ ಪೂರ್ವ ಬೊಮ್ಮಲಿಂಗೇಶ್ವರ ಮತ್ತು ಲಕ್ಕಮ್ಮ ದೇವಿ ಮೂರ್ತಿಗೆ ಅಭಿಷೇಕ, ವಿಶೇಷ ಪೂಜೆ ಜರುಗಿದ ಬಳಿಕ ಬ್ರಹ್ಮಲಿಂಗ ಸ್ವಾಮಿಗಳ ಮೌನಾನುಷ್ಠಾನ ಮಹಾಮಂಗಲಗೊಂಡಿತು.

ಅರಕೇರಿ ಮತ್ತು ದುರ್ಗಾಪೂರ ಗ್ರಾಮದಲ್ಲಿ ಕುಂಭ, ಆರತಿ, ಶಿವಭಜನೆ, ಡೊಳ್ಳು, ಸಕಲ ವಾದ್ಯ ವೈಭಗಳೊಂದಿಗೆ ಬ್ರಹ್ಮಲಿಂಗ ಸ್ವಾಮಿಗಳ ಮೆರವಣಿಗೆಯನ್ನು ಭಕ್ತರು ಶ್ರದ್ಧಾ,

ಭಕ್ತಿಯಿಂದ ಮಾಡಿ ಬೊಮ್ಮಲಿಂಗೇಶ್ವರ ಆಶ್ರಮಕ್ಕೆ ಆಗಮಿಸಿದ ಬಳಿಕ ಧರ್ಮ ಸಭೆ ಜರುಗಿತು.

ಜೋಕಾನಟ್ಟಿಯ ಬಿಳಿಯಾನಸಿದ್ಧ ಸ್ವಾಮಿಗಳು, ಬದ್ನೂರದ ಮಲ್ಲಯ್ಯಸ್ವಾಮಿ ಹಿರೇಮಠ, ರಾಮಪೂರದ ಬಸವರಾಜಸ್ವಾಮೀಜಿ ಘಂಟಿ, ಸಾಹಿತಿ ಸದಾನಂದ ಏಳಗಂಟಿ, ಸಿದ್ದಣ್ಣ ಯಂಡಿಗೇರಿ ಮತ್ತಿತರಿದ್ದರು.

# ಶ್ರಾವಣ ಮಾಸದ ಸಮಾರೋಪ: ಜಟೋತ್ಸವ ವೀಕ್ಷಿಸಿದ ಸಾವಿರಾರು ಭಕ್ತರು



**ಮಹಾಲಿಂಗಪುರ :** ಶ್ರಾವಣ ಮಾಸದ ಸಮಾರೋಪ ನಿಮಿತ್ಯವಾಗಿ ಪಟ್ಟಣದ ಆರಾಧ್ಯ ದೈವ, ಪವಾಡ ಪುರುಷ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಪ್ರಸಕ್ತ ವರ್ಷದ ಶ್ರಾವಣ ಮಾಸದ ಸಾರ್ವಜನಿಕ ಜಟೋತ್ಸವ ಸಂಭ್ರಮದಿಂದ ಜರುಗಿತು.

ಸಾರ್ವಜನಿಕ ಜಟೋತ್ಸವ ನಿಮಿತ್ಯ ಬಾಳೆಗಿಡ, ಕಬ್ಬು, ಹೂವಿನಿಂದ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ವಿಶೇಷ ಅಲಂಕಾರ ಮಾಡಲಾಗಿತ್ತು. ಪೀಠಾಧಿಪತಿ ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳ ನೇತೃತ್ವದಲ್ಲಿ ಜಟೋತ್ಸವ ಮತ್ತು ಮಹಾಪೂಜೆ ಹಾಗೂ ಬೆಳ್ಳಿರಥೋತ್ಸವ ಕಾರ್ಯಕ್ರಮಗಳು ಜರುಗಿದವು. ಈ ಸಂದರ್ಭದಲ್ಲಿ ಕರಡಿ ಕಲಾವಿದರು ಕರಡಿ ಸೇವೆ ಸಲ್ಲಿಸಿದರು.

ಶ್ರಾವಣ ಮಾಸದ ವಿಶೇಷ ಪೂಜೆಯಲ್ಲಿ ಭಾಗವಹಿಸಿದವರಿಗೆ ತಮ್ಮ ಇಷ್ಠಾರ್ಥಗಳು ದೊರೆಯುತ್ತವೆ ಎಂಬ ಪ್ರತೀತಿ ಇದೆ. ತಮ್ಮ ಇಷ್ಟಾರ್ಥಗಳ ಹರಕೆ ಹೊತ್ತ ಭಕ್ತರು ಶ್ರಾವಣ ಮಾಸ ಪೂರ್ತಿ ದಿನಕ್ಕೆ ನಾಲ್ಕೈದು ಜನರಂತೆ ಸರತಿಯಲ್ಲಿ ಜಟೋತ್ಸವ, ಬೆಳ್ಳಿ ರಥೋತ್ಸವ ಮತ್ತು ಮಹಾಪ್ರಸಾದ ಸೇವೆಯನ್ನು ಸಲ್ಲಿಸಿ ಕೃತಾರ್ಥರಾದರು.

**ಮಹಾಪ್ರಸಾದ :** ಶ್ರಾವಣ ಮಾಸದ ಸಮಾರೋಪ ನಿಮಿತ್ಯ ಮಂಗಳವಾರ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಶ್ರೀಮಠದ ವತಿಯಿಂದ ಮಹಾಪ್ರಸಾದಕ್ಕಾಗಿ 6 ಕ್ವಿಂಟಾಲ್ ಸಿಹಿ ಪಾಯಸ(ಸಜ್ಜಕ), 8 ಕ್ವಿಂಟಾಲ್ ಅನ್ನಪ್ರಸಾದ ತಯಾರಿಸಲಾಗಿತ್ತು. ಮಧ್ಯಾಹ್ನ ಎರಡು ಗಂಟೆಯಿಂದ ಸಂಜೆವರೆಗೂ ಸಾವಿರಾರು ಭಕ್ತರು ಮಹಾಪ್ರಸಾದ ಸ್ವೀಕರಿಸಿದರು. ಮಂಗಳವಾರ ರಾತ್ರಿಯೂ ದೇವಸ್ಥಾನದ ಹಿರಿಯರ ವತಿಯಿಂದ ಮಹಾಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಜಾತ್ರಾ ಕಮೀಟಿ ಅಧ್ಯಕ್ಷರಾದ ರವಿಗೌಡ ಪಾಟೀಲ, ಕೃಷ್ಣಗೌಡ ಪಾಟೀಲ, ಈಶ್ವರ ಮಠದ, ವಿಠ್ಠಲಗೌಡ ಪಾಟೀಲ, ಸುಭಾಸ ವಜ್ಜರಮಟ್ಟಿ, ಶ್ರೀಶೈಲ, ಸಿದ್ದಯ್ಯಾ, ಬ್ರಹ್ಮ ಕೋಟಿ, ಶ್ರೀಧರ ಗಿಂಡೆ, ಪ್ರಮೋದ ಬಾಳಿಕಾಯಿ, ಬಸವರಾಜ ಕಬ್ಬೂರ, ಶೇಖರ ವಗ್ಗರ, ಸಂತೋಷ ಶಿರೋಳ, ಅರುಣ ಪುರಾಣಿಕ, ಮಲ್ಲಪ್ಪ ಚಮಕೇರಿ, ಶ್ರೀಶ ಬುದ್ನಿ, ಮಹಾಲಿಂಗ ದೇಸಾಯಿ ಸೇರಿದಂತೆ ಮಹಾಲಿಂಗೇಶ್ವರ ಮತ್ತು ಚನ್ನಗೀರೇಶ್ವರ ದೇವಸ್ಥಾನದ ಸೇವಕರು, ಭಕ್ತರು ಸೇವೆ ಸಲ್ಲಿಸಿದರು.

## ಪತ್ರಕರ್ತರ ರೈಲ್ವೆ ಪಾಸನ್ನು ಪುನಾರಂಭಿಸವಂತೆ ಸಂಪಾದಕರ ಸಂಘದಿಂದ ರೈಲ್ವೆ ಸಚಿವರಿಗೆ ಮನವಿ ಸಲ್ಲಿಕೆ



**ರಾಯಚೂರು :** ಕೋವಿಡ್–19 ಸಂದರ್ಭದಲ್ಲಿ ಸ್ಥಗಿತಗೊಂಡಿದ್ದ ಪತ್ರಕರ್ತರ ರೈಲ್ವೆಯ ಪಾಸನ್ನು ಪುನಾರಂಭಿಸವಂತೆ ರೈಲ್ವೆ ಕೇಂದ್ರ ಖಾತೆ ರಾಜ್ಯ ಸಚಿವರಾದ ವಿ. ಸೋಮಣ್ಣ ಅವರಿಗೆ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ಪದಾಧಿಕಾರಿಗಳು ಮನವಿ ಸಲ್ಲಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ದಿನಪತ್ರಿಕೆಗಳ ಸಂಪಾದಕರು ಸೇರಿಕೊಂಡು ಸ್ಥಾಪಿಸಿರುವ ಕರ್ನಾಟಕದ ಏಕೈಕ ಸಂಪಾದಕರ ಸಂಘವಾಗಿದೆ. ಕೋವಿಡ್–19 ಸಂದರ್ಭದಲ್ಲಿ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಪತ್ರಕರ್ತರಿಗೆ ವಿತರಿಸುತ್ತಿದ್ದ ರೈಲ್ವೆ ಪಾಸ್ನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ, ಈಗ ಕೋವಿಡ್–19 ಅಲೆ ಮುಕ್ತಾಯಗೊಂಡು 3–4 ವರ್ಷಗಳು ಗತಿಸಿದರೂ ಸಹ ಈವರೆಗೂ ಸದರಿ ರೈಲ್ವೆ ಇಲಾಖೆಯಿಂದ ಪಾಸ್ಗಳನ್ನು ಪುನರಾರಂಭಿಸಿರುವುದಿಲ್ಲ. ಇದರಿಂದಾಗಿ ಮಾನ್ಯತೆ ಹೊಂದಿದ ಪತ್ರಕರ್ತರಿಗೆ ರೈಲು ಪ್ರಯಾಣ ಮರೀಚಿಕೆಯಾಗಿದೆ. ದೂರದ ಪ್ರಯಾಣಗಳಿಗೆ ಕೇವಲ ಬಸ್ಗಳನ್ನಷ್ಟೇ ಅವಲಂಬಿಸುವ ಪರಿಸ್ಥಿತಿ ಉಂಟಾಗಿದೆ.

ಆದಕಾರಣ, ತಾವುಗಳು ರೈಲ್ವೆ ಇಲಾಖೆಯಿಂದ ಮಾನ್ಯತೆ ಪಡೆದ ಪತ್ರಕರ್ತರಿಗೆ ಸ್ಥಗಿತಗೊಳಿಸಿದ್ದ ರೈಲ್ವೆ ಪಾಸ್ನ್ನು ಪುನಃ ಪ್ರಾರಂಭಿಸಿ ಪತ್ರಕರ್ತರಿಗೆ ಅನುಕೂಲತೆ ಕಲ್ಪಿಸಿಕೊಡಬೇಕೆಂದು ನೀಡಿರುವ ಮನವಿಯಲ್ಲಿ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ಚನ್ನಬಸವ ಬಾಗಲವಾಡ, ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ಖಜಾಂಚಿಗಳಾದ ಖಾನಸಾಬ್ ಮೋಮಿನ್, ಸೇರಿದಂತೆ ಸಂಘದ ಇನ್ನಿತರ ಪದಾಧಿಕಾರಿಗಳು ಇದ್ದರು.

# ಸ್ಥಾಯಿ ಸಮಿತಿ ಚೇರಮನ್‌ರಾಗಿ ಅರುಣ ಬುದ್ನಿ ಆಯ್ಕೆ



**ರಬಕವಿ–ಬನಹಟ್ಟಿ :** ನಗರಸಭೆಯ ನೂತನ ಸ್ಥಾಯಿ ಸಮಿತಿ ಚೇರಮನ್ರಾಗಿ ಅರುಣ ಬುದ್ನಿ ಅವಿರೋಧವಾಗಿ ಆಯ್ಕೆಗೊಂಡರು.

ಇದಕ್ಕೂ ಮುಂಚೆ 11 ಜನರ ಸಮಿತಿ ಸದಸ್ಯರಾಗಿ ಪ್ರತಿಭಾ ಹಳ್ಳೂರ, ಸಂಜಯ ತೆಗ್ಗಿ, ಯಲ್ಲಪ್ಪ ಕಟಗಿ, ವಿಜಯ ಕಲಾಲ, ಶ್ರೀಶೈಲ ಆಲಗೂರ, ಗೌರಿ ಮಿಳ್ಳಿ, ಜಯಶ್ರೀ ಬಾಗೇವಾಡಿ, ದುರ್ಗವ್ವ ಹರಿಜನ, ಚಿದಾನಂದ ಹೊರಟ್ಟಿ, ಶಿವಾನಂದ ಬುದ್ನಿ ನೇಮಕಗೊಂಡಿದ್ದಾರೆ.

# ಕ್ರೀಡೆಯಿಂದ ವ್ಯಕ್ತಿತ್ವ ವಿಕಸನ: ಶಾಸಕ ಸಿದ್ದು ಸವದಿ



**ರಬಕವಿ :** ವಿದ್ಯಾರ್ಥಿಗಳು ಓದಿನ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಕೂಡಾ ಮಹತ್ವ ನೀಡಬೇಕು. ಕ್ರೀಡೆಯಲ್ಲಿ ಸಾಧನೆ ಮಾಡುವುದರಿಂದ ವ್ಯಕ್ತಿಯ ವ್ಯಕ್ತಿತ್ವ ವಿಕಸನವಾಗುತ್ತದೆ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಅವರು ಮಂಗಳವಾರ ಸಮೀಪದ ರಾಮಪುರದ ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ನಡೆದ ರಬಕವಿ ಬನಹಟ್ಟಿ ತಾಲ್ಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಕ್ರೀಡಾ ಸಾಮಾರ್ಥ್ಯವನ್ನು ಪ್ರದರ್ಶನ ಮಾಡಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಉತ್ತಮ ಸಾಧನೆ ಮಾಡುವುದರ ಜೊತೆಗೆ ತಮ್ಮ ಊರು, ತಾವು ಕಲಿತ ಶಿಕ್ಷಣ ಸಂಸ್ಥೆ, ರಾಜ್ಯ ಮತ್ತು ದೇಶಕ್ಕೆ ಕೀರ್ತಿ ತರುವಂಥ ಸಾಧನೆ ಮಾಡಬೇಕು. ಸತತ ಪರಿಶ್ರಮದಿಂದ ಮಾತ್ರ ಸಾಧನೆ ಮಾಡಲು ಸಾಧ್ಯ. ತೀರ್ಪುಗಾರರು ಉತ್ತಮವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಸಂಸ್ಥೆಯ ಕಾರ್ಯಾಧ್ಯಕ್ಷ ಸಿದ್ದಪ್ಪ ಮೇಣಿ ಮಾತನಾಡಿ, ಸೋಲು ಮತ್ತು ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು. ಪ್ರತಿಯೊಬ್ಬರು ಕ್ರೀಡಾ ಮನೋಭಾವನೆಯಿಂದ ಕ್ರೀಡಾಕೂಟದಲ್ಲಿ ಭಾಗವಹಿಸಬೇಕು ಎಂದರು.

ಸಂಸ್ಥೆಯ ಕಾರ್ಯದರ್ಶಿ ಶಕೀಲ್ ನದಾಫ ಕ್ರೀಡಾ ಧ್ವಜಾರೋಹಣ ನೆರವೇರಿಸಿದರು. ಉಪಾಧ್ಯಕ್ಷ ರಾಮದಾಸ ಸಿಂಗಣ, ಖಜಾಂಚಿ ಎಸ್. ಕೆ. ಕರಡಿ, ತಾಲ್ಲೂಕು ದೈಹಿಕ ಪರಿವೀಕ್ಷಕರಾದ ಪಿ. ಎಸ್. ನಂದೇಶ, ಪ್ರಾಚಾರ್ಯರಾದ ಬಿ. ಆರ್. ಗೊಡ್ಡಾಳೆ, ಅದೃಶ್ಯಯ್ಯ ಕಾಡದೇವರ, ಜಿಲ್ಲಾ ಕ್ರೀಡಾ ಸಂಯೋಜಕ ಬಿ. ಎಸ್. ಹೂಗಾರ, ಸಂಗಮೇಶ ಮುಕುರ್ತಿಹಾಳ, ಮಹಾಂತೇಶ ಮುರಗೋಡ, ಬಿ. ಜೆ. ಜೋರಾಪುರ, ಆರ್. ಎಸ್. ಮಟ್ಟಿಕಲ್ಲಿ, ಎಸ್. ಎಂ. ಹಾಡಕರ್, ಎಂ. ಆರ್. ಮುಲ್ಲಾ, ಶಂಕರ ಸೊಲ್ಲಾಪುರ, ಬಿ. ಎಸ್. ಹಳ್ಳೂರ, ಎಲ್. ಪಿ. ಗಂಟೆನ್ನವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಲೇ–ಔಟ್‌ಗಳಲ್ಲಿ ಮೂಲ ಸೌಕರ್ಯಗಳ ಕೊರತೆ: ಸೂಕ್ತ ಕ್ರಮಕ್ಕೆ ಆಗ್ರಹ

## ಸಾಮಾನ್ಯ ಸಭೆಯಲ್ಲಿ ಲೇಔಟ್ಗಳದ್ದೇ ಸದ್ದು | ಅಭಿವೃದ್ಧಿಯಾಗದ ಉದ್ಯಾನವನಗಳು

### ನಗರಸಭೆಯ ಆಸ್ತಿಯನ್ನು ಹಾಳು ಮಾಡಿದವರ ವಿರುದ್ಧ ಎಫ್.ಐ.ಆರ್. | ಹದಿನೈದು ಜನ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲು ಅನುಮೋದನೆ



**ರಬಕವಿ–ಬನಹಟ್ಟಿ :** ರಬಕವಿ ಬನಹಟ್ಟಿನಗರಸಭೆಯವ್ಯಾಪ್ತಿಯಲ್ಲಿ ನಿರ್ಮಾಣವಾಗುತ್ತಿರುವ ಲೇ–ಔಟ್‌ಗಳಲ್ಲಿಮೂಲಸೌಕರ್ಯಗಳ ಕೊರತೆ ಇದ್ದು ಲೇ– ಔಟ್ ಗಳ ಮಾಲೀಕರು ನಗರಸಭೆಯ ಯಾವುದೇ ನಿಯಮಗಳನ್ನು ಪಾಲನೆ ಮಾಡುತ್ತಿಲ್ಲ. ಲೇ – ಔಟ್ ಗಳಲ್ಲಿ ಕಳಪೆ ಕಾಮಗಾರಿ ಮತ್ತು ಸುಳ್ಳು ಮಾಹಿತಿಯನ್ನು ನಗರಸಭೆಗೆ ನೀಡುತ್ತಿದ್ದಾರೆ. ಅಂಥವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸದಸ್ಯರು ನಗರಸಭೆಯ ಅಧಿಕಾರಿಗಳನ್ನು ಆಗ್ರಹಿಸಿದರು.

ಮುಂದಿನ ದಿನಗಳಲ್ಲಿ ಇಂಥ ಲೇ– ಔಟ್ ಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ನಗರಸಭೆಯ ಸಾಮಾನ್ಯ ಸಭೆಯ ಅನುಮತಿಯನ್ನು ಪಡೆದುಕೊಳ್ಳಬೇಕು. ಅಧ್ಯಕ್ಷರನ್ನು ಒಳಗೊಂಡಂತೆ ಒಂದು ಸಮಿತಿಯನ್ನು ನಿರ್ಮಿಸಬೇಕು ಎಂದು ನಗರಸಭೆಯ ಸದಸ್ಯ ಸಂಜಯ ತೆಗ್ಗಿ ಸಭೆಯಲ್ಲಿ ಆಗ್ರಹಿಸಿದರು.

ಮತ್ತೋರ್ವ ಸದಸ್ಯ ಶ್ರೀಶೈಲ ಬೀಳಗಿ ಮಾತನಾಡಿ, ಲೇ–ಔಟ್ ಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ನಗರಸಭೆಯ ರಸ್ತೆ, ಚರಂಡಿ ಸೇರಿದಂತೆ ಆಸ್ತಿಗಳನ್ನು ಹಾಳು ಮಾಡುತ್ತಿದ್ದಾರೆ. ಅಂಥವರ ವಿರುದ್ಧ ಎಫ್. ಐ. ಆರ್. ದಾಖಲಿಸುವಂತೆ ಆಗ್ರಹಿಸಿದರು.

ಇ– ಆಸ್ತಿಗಳ ಗೊಂದಲದಿಂದಾಗಿ ಅವಳಿ ನಗರಗಳ ಸಾರ್ವಜನಿಕರಿಗೆ ಆಸ್ತಿಗಳ ನೊಂದಣಿ, ಮಾರಾಟ ಮತ್ತು ಖರೀದಿ ಮಾಡಲು ಅತೀವ ತೊಂದರೆಯಾಗಿದೆ. ಈ ಕುರಿತು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಇದನ್ನು ಸರಳೀಕರಣಗೊಳಿಸಲು ತಿಳಿಸಿದರು.

ನಗರಸಭೆಯ ವ್ಯಾಪ್ತಿಯಲ್ಲಿ ಇಪ್ಪತ್ತು ಸಾವಿರ ಆಸ್ತಿಗಳಿವೆ. ಆದ್ದರಿಂದ ಆಸ್ತಿಗಳ ಮಾಲೀಕರು ತಮ್ಮ ಸೂಕ್ತ ದಾಖಲೆಗಳನ್ನು ನೀಡಿ ಆಸ್ತಿಗಳನ್ನು ಇ–ಆಸ್ತಿಕರಣಗೊಳಿಸಿ ಕೊಳ್ಳಬೇಕು ಎಂದು ಪೌರಾಯುಕ್ತ ಜಗದೀಶ ಈಟಿ ತಿಳಿಸಿದರು.

ನಗರಸಭೆಯ ಅಧಿಕಾರಿಗಳು ರಬಕವಿ ನಗರದಲ್ಲಿರುವ ಉದ್ಯಾನ ವನಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ಸಂಜಯ ತೆಗ್ಗಿ ಆಗ್ರಹಿಸಿದರು.

ಲೆಕ್ಕಪತ್ರಗಳ ಮಾಹಿತಿಯನ್ನು ಸದಸ್ಯರಿಗೆ ನೀಡಿ: ಸಾಮಾನ್ಯ ಸಭೆಗಿಂತ ಮುಂಚಿತವಾಗಿ ನಗರಸಭೆಯ ಸದಸ್ಯರಿಗೆ ಲೆಕ್ಕ ಪತ್ರಗಳ ಮಾಹಿತಿಯನ್ನು ನೀಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು. ನಗರಸಭೆಯ ಲೆಕ್ಕಪತ್ರಗಳು ಪಾರದರ್ಶಕವಾಗಿರಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಸರ್ವರ್ ಸಮಸ್ಯೆಯಿಂದಾಗಿ ಹಣಕಾಸು ಪರಿಸ್ಥಿತಿ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

ನಗರಸಭೆಯ ಸದಸ್ಯೆ ದುರ್ಗವ್ವ ಹರಿಜನ ಮಾತನಾಡಿ, ಅಧಿಕಾರಿಗಳು ಸರಿಯಾಗಿ ಕರ್ತವ್ಯ ನಿರ್ವಹಣೆ ಮಾಡದೆ ಇರುವುದರಿಂದ ವಾರ್ಡಿನಲ್ಲಿ ಯಾವುದೇ ದುರಸ್ತಿ ಕಾರ್ಯಗಳು ನಡೆಯುತ್ತಿಲ್ಲ. ಇದರಿಂದಾಗಿ ವಾರ್ಡ್ ಜನರಿಗೆ ನಾವು ಉತ್ತರ ನೀಡುವುದು ಕಷ್ಟವಾಗಿದೆ. ಆದ್ದರಿಂದ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುವಂತೆ ಆಗ್ರಹಿಸಿದರು.

ವೃತ್ತ ನಾಮಕರಣ: ಬನಹಟ್ಟಿಯ ಸೋಮವಾರ ಪೇಟೆಯಲ್ಲಿನ ರಸ್ತೆಗೆ ಸಂಗೊಳ್ಳಿ ರಾಯಣ್ಣ ವೃತ್ತ ಎಂಬ ನಾಮಕರಣಕ್ಕೆ ಸಭೆ ಅಂಗೀಕರಿಸಿತು. ಪ್ರಸಕ್ತ ವರ್ಷ ವಿವಿಧ ಘಟಕಗಳಲ್ಲಿನ ಕಾರ್ಯನಿರ್ವಹಣೆಯ ಕಾರ್ಮಿಕರವೇತನಕ್ಕಾಗಿಸುಮಾರುಒಂದು ಕೋಟಿ ರೂ.ಗಳಷ್ಟು ಟೆಂಡರ್ ಕರೆಯಲು ಸಭೆ ತೀರ್ಮಾನಿಸಿತು.

ಅವಳಿ ನಗರಾದ್ಯಂತವಿರುವ ಶೌಚಾಲಯ ನಿರ್ವಹಣೆದಾರರಿಗೆ ಉಚಿತವಾಗಿತ್ತು. ಇದೀಗ ಟೆಂಡರ್ ಕರೆಯುವ ಮೂಲಕ ಹೊಸ ನಿರ್ವಹಣೆದಾರರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಸದಸ್ಯರುಸಹಮತತೋರಿಸಿದರು. ವಿವಿಧ ಟೆಂಡರಗಳಿಗೆ ಸಭೆಯಲ್ಲಿ ಅನುಮೋದನೆಯನ್ನು ನೀಡಲಾಯಿತು.

ಯಲ್ಲಪ್ಪ ಕಟಗಿ, ಗೌರಿ ಮಿಳ್ಳಿ, ಬಸವರಾಜ ಗುಡೋಡಗಿ, ಚಿದಾನಂದ ಹೊರಟ್ಟಿ, ಶಶಿಕಲಾ ಸಾರವಾಡ ಸೇರಿದಂತೆ ಅನೇಕರು ವಾರ್ಡಗಳ ಸಮಸ್ಯೆಗಳನ್ನು ಸಭೆಗೆ ತಿಳಿಸಿದರು.

ನಗರಸಭೆಯ ಅಧ್ಯಕ್ಷೆ ವಿದ್ಯಾ ಧಬಾಡಿ, ಉಪಾಧ್ಯಕ್ಷೆ ದೀಪಾ ಗಾಡಿವಡ್ಡರ ಹಾಜರಿದ್ದರು.

ನಗರಸಭೆಯ ಮ್ಯಾನೇಜರ್ ಮುಖೇಶ ಬನಹಟ್ಟಿ, ವೈಶಾಲಿ ಹಿಪ್ಪರಗಿ, ಶೋಭಾ ಹೊಸಮನಿ, ಸಂಗೀತಾ ಕೋಳಿ, ಮುತ್ತಪ್ಪ ಚೌಡಕಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಪ್ರಭುದೇವರ ಜಾತ್ರೆ ನಿಮಿತ್ತ ಸಂಭ್ರಮದ ಪಲ್ಲಕ್ಕಿ ಉತ್ಸವ



**ತೇರದಾಳ :** ಅನುಭವ ಮಂಟಪದ ಪೀಠಾಧ್ಯಕ್ಷ ತೇರದಾಳ ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ಜಾತ್ರಾ ಮಹೋತ್ಸವ ನಿಮಿತ್ತ ಶ್ರಾವಣ ಮಾಸದ ಕೊನೆಯ ಸೋಮವಾರ ಪ್ರಭುದೇವರ ಪಲ್ಲಕ್ಕಿ ಹಾಗೂ ನಂದಿಕೋಲು ಉತ್ಸವ ಸಹಸ್ರಾರು ಭಕ್ತಾಧಿಗಳ ಸಮ್ಮುಖದಲ್ಲಿ ಸಂಭ್ರಮ ಸಡಗರದಿಂದ ಜರುಗಿತು.

ಜಾತ್ರೆಯ ನಿಮಿತ್ತ ದೇವಸ್ಥಾನದಲ್ಲಿ ಪ್ರಭುದೇವರ ಗದ್ದುಗೆಗೆ ನಸುಕಿನ ಜಾವ ರುದ್ರಾಭಿಷೇಕ, ಊದು ನೀಡುವುದು ಬಳಿಕ ಅಲಂಕಾರಿತ ಪೂಜೆ, ಮಂಗಳಾರುತಿ, ತುಪ್ಪದಾರುತಿ ಸೇರಿದಂತೆ ಹಲವು ಧಾರ್ಮಿಕ ಕಾರ್ಯಕ್ರಮಗಳು ಅರ್ಚಕ ಪರಯ್ಯ ಮೇಲಿನಮನಿ ಅವರಿಂದ ಜರುಗಿದವು. ಸಂಪ್ರದಾಯದಂತೆ ನಾಡಗೌಡರ ಮನೆಯಿಂದ ನಂದಿಕೋಲು ಬಂದ ಬಳಿಕ ಮದ್ಯಾಹ್ನದ ಪೂಜೆ ಪ್ರಾರಂಭಗೊಂಡಿತು. ನಂತರ ದೇವಸ್ಥಾನ ಆವರಣದಲ್ಲಿ ಪಲ್ಲಕ್ಕಿ ಹಾಗೂ ನಂದಿಕೋಲು ಉತ್ಸವಕ್ಕೆ ಚಾಲನೆಗೊಂಡಿತು. ವಾಡಿಕೆಯಂತೆ ದೇವಸ್ಥಾನದ ಸುತ್ತ ನಡೆದ ಉತ್ಸವದ ಮೂರು ಸುತ್ತು ಜರುಗಿತು. ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಭಕ್ತ ಸಮೂಹ, ಬೆಂಡು ಉತ್ತತ್ತಿ, ಬರ್ಫಿ, ಬೆಂತೋಸ, ಬಿಸ್ಕತ್‌ಗಳನ್ನು ಎಸೆದು ಭಕ್ತಿಯ ಪರಾಕಷ್ಠೆಗೆ ಸಾಕ್ಷಿಯಾದರು. ಪ್ರಭುಲಿಂಗ ಝಾಂಜ್ ಪಥಕ್, ಕರಡಿ ಮಜಲು, ಸಂಬಾಳ ಹಾಗೂ ಇನ್ನಿತರ ಕಲಾವಿದರು ಉತ್ಸವಕ್ಕೆ ಮೆರಗು ನೀಡಿದರು. ನಿಗದಿತ ಸ್ಥಳಗಳಲ್ಲಿ ಅಪ್ಪಾಸಾಬ ಹಳ್ಯಾಳ, ಶೇಖರ ಸಲಬನ್ನವರ, ಮುತ್ತವ್ವ ನಾವಿ, ಮೀನಾಕ್ಷಿ ಐನಾಪುರ, ಸುರ್ವಣ ಮೋಪಗಾರ, ಚನ್ನಪ್ಪ ಚೌಗಲಾ ಸೇರಿದಂತೆ ಹಲವು ವಚನ ಗೀತೆಗಳನ್ನು ಹಾಡಿದರು.

ಜಾತ್ರೆಯ ನಿಮಿತ್ತ ಭಾನುವಾರ ರಾತ್ರಿಯಿಂದಲೇ ಅಪಾರ ಸಂಖ್ಯೆಯಲ್ಲಿ ಭಕ್ತಾಧಿಗಳು ದೀಢ್ ನಮಸ್ಕಾರ ಹಾಕಿದ್ದು ಸಾಮಾನ್ಯವಾಗಿತ್ತು. ಪಟ್ಟಣದ ವಿಜಯಮಹಾಂತೇಶ ನಾಡಗೌಡ, ಪ್ರವೀಣ ನಾಡಗೌಡ, ಶಾಸಕರಾದ ಸಿದ್ದು ಸವದಿ, ಜಗದೀಶ ಗುಡಗುಂಟಿ, ಗುಹೇಶ್ವರ ಪುರಾಣಿಮಠ,

ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಹಾಗೂ ಮಹಾರಾಷ್ಟ್ರದ ಮುಂಬಯಿ, ಪುಣೆ, ಕೋಲ್ಲಾಪುರ, ಸಾಂಗಲಿ, ಮಿರಜ್, ಇಂಚಲಕರಂಜಿ, ಬೆಂಗಳೂರು, ಬೆಳಗಾವಿ, ಧಾರವಾಡ, ಬಾಗಲಕೋಟೆ, ವಿಜಯಪುರ ಸೇರಿದಂತೆ ಬೇರೆ ಬೇರೆ ಭಾಗಗಳಿಂದ ಅಪಾರ ಭಕ್ತರು ಆಗಮಿಸಿದ್ದರು. ಬನಹಟ್ಟಿ ಸಿಪಿಐ ಸಂಜೀವ ಬಳಗಾರ, ಪಿಎಸ್‌ಐಗಳಾದ ಅಪ್ಪಣ್ಣ ಐಗಳಿ, ವಿಜಯ ಕಾಂಬಳೆ ಮುಂಜಾಗ್ರತವಾಗಿ ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.

# ನಗರದಲ್ಲಿ ಐತಿಹಾಸಿಕ ರಾಮೇಶ್ವರ ಅದ್ದೂರಿ ರಥೋತ್ಸವ



**ಜಮಖಂಡಿ :** ಶ್ರಾವಣ ಮಾಸದ ಕೊನೆ ಸೋಮವಾರದ ನಿಮಿತ್ತ ಜಮಖಂಡಿ ಸಂಸ್ಥಾನದ ಪಟವರ್ಧನ ಮಹಾರಾಜರ ಅರಮನೆ ಪಕ್ಕದ ಬೆಟ್ಟದ ಮೇಲಿರುವ ಐತಿಹಾಸಿಕ ರಾಮೇಶ್ವರ ದೇವಸ್ಥಾನದ ರಥೋತ್ಸವ ಸಂಭ್ರಮ ಅದ್ದೂರಿಯಿಂದ ನಡೆಯಿತು. ಶಾಸಕ ಜಗದೀಶ ಗುಡಗುಂಟಿ, ಮಾಜಿ ಶಾಸಕ ಆನಂದ ನ್ಯಾಮಗೌಡ, ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ, ಅರ್ಬನ ಬ್ಯಾಂಕ್ ಅಧ್ಯಕ್ಷ ರಾಹುಲ ಕಲೂತಿ ಸಹಿತ ಅರ್ಚಕರು, ಪ್ರಮುಖರು, ಗಣ್ಯರು ರಥೋತ್ಸವದಲ್ಲಿ ಭಾಗವಹಿಸಿ ದರ್ಶನ ಪಡೆದರು. ಸಹಸ್ರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿದ್ದರು. ದೇವಸ್ಥಾನದ ಅರ್ಚಕರಾದ ಮಹದೇವ ಪೂಜಾರ, ಬಸಯ್ಯ ಪೂಜಾರ ಮನೆತನದವರು ಉಸ್ತುವಾರಿ ವಹಿಸಿದ್ದರು. ಸಿಪಿಐ ಮಲ್ಲಪ್ಪ ಮಡ್ಡಿ ನೇತೃತ್ವದಲ್ಲಿ ಬಿಗಿ ಬಂದೋಬಸ್ತ ವ್ಯವಸ್ಥೆ ಕೈಗೊಂಡಿದ್ದರು.

# ಪತ್ನಿ ಕೊಲೆಗೆ ಪ್ರಯತ್ನಿಸಿದ ಆರೋಪಿ ವೆಂಕಪ್ಪನಿಗೆ ಶಿಕ್ಷೆ

**ಜಮಖಂಡಿ :** ಬನಹಟ್ಟಿ ಪೊಲೀಸ ಠಾಣೆ ವ್ಯಾಪ್ತಿಯ ಕಲ್ಹಳ್ಳಿ ಗ್ರಾಮದ ಫಿರ್ಯಾದಿದಾರನ ಹೆಂಡತಿಗೆ ಕೊಲೆಗೆ ಪ್ರಯತ್ನಿಸಿದ ಅಪರಾಧಕ್ಕಾಗಿ 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆರೋಪಿತನಾದ ಚಂದ್ರಶೇಖರ ದುಂಡಪ್ಪ ಕಾಸರ ಈತನಿಗೆ ಶಿಕ್ಷೆ ವಿಧಿಸಿ ತೀರ್ಪು ವಿಧಿಸಿದೆ.

ಬನಹಟ್ಟಿ ಠಾಣೆಯ ಹದ್ದಿಯಲ್ಲಿ ಬರುವ ಕಲ್ಹಳ್ಳಿ ಗ್ರಾಮದದಲ್ಲಿರುವ ನೀಲವ್ವ ವೆಂಕಪ್ಪ ಹನಗಂಡಿ (37) ಗಾಯಾಳು ತನ್ನ ಗಂಡ ವೆಂಕಪ್ಪ ಹನಗಂಡಿ ಮತ್ತು 2 ಮಕ್ಕಳೊಂದಿಗೆ ಜೀವನ ಮಾಡುತ್ತಿದ್ದು, ಕಲ್ಲಳ್ಳಿಯ ಕನ್ನಡ ಶಾಲೆಯಲ್ಲಿ ಬಿಸಿಯೂಟ ಮಾಡುವ ಅಡುಗೆ ಸಹಾಯಕಿ ಅಂತಾ ಕೆಲಸ ಮಾಡುತ್ತಿದ್ದು, ಅದೇ ಗ್ರಾಮದ ಚಂದ್ರಶೇಖರ ದುಂಡಪ್ಪ ಕಾಸರ ಪರಿಚಯವಾಗಿ ಪರಿಚಯ ಸಲುಗೆಯಾಗಿಸಿ ಶಾಲೆಗೆ ಬರುವ ಸಾರ್ವಜನಿಕರು, ಗಂಡಸರೊಂದಿಗೆ ಪಿರ್ಯಾಧಿ ಹೆಂಡತಿ ಮಾತನಾಡುತ್ತಿದ್ದರಿಂದ ನೀನು ಬೇರೆಯವರೊಂದಿಗೆ ಯಾಕೇ ಅತಿ ಸಲುಗೆಯಿಂದ ಮಾತಾನಾಡುತ್ತಿ ಅವರೊಂದಿಗೆ ನೀನು ಅನೈತಿಕ ಸಂಬಂಧ ಹೊಂದಿರುತ್ತಿ ಅಂತಾ ವಿನಾಕಾರಣ ಫಿರ್ಯಾದಿಯ ಹೆಂಡತಿಯ ಮೇಲೆ ಶಂಕಿಸಿ ತನ್ನೊಂದಿಗೆ ಸಂಬಂಧ ಬೆಳೆಸುವುದಿಲ್ಲ ಅಂತಾ ಅವಳಿಗೆ ಕೊಲೆ ಮಾಡುವ ಉದ್ದೇಶದಿಂದ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವ ಬಂಡಿಗಣಿ ಗ್ರಾಮದ ಹದ್ದಿಯ ಪೈಕಿ ದುಂಡಪ್ಪ ಕಾಸಾರ ಕಬ್ಬು ಬೆಳೆದ ಹೊಲದಲ್ಲಿ ದಿನಾಂಕ:13.09.2021 ರಂದು ಅವಳಿಗೆ ಕರೆಸಿ ನಿನಗೆ ಎಷ್ಟು ಸಾರಿ ಹೇಳಿದರು ಸಹ ನೀನು ಬೇರೆ ಗಂಡಸರ ಜೊತೆ ಸಲುಗೆಯಿಂದ ಮಾತನಾಡುವುದು ಬಿಟ್ಟಿಲ್ಲ ಇವತ್ತ ನಿನಗೆ ಜೀವ ಸಹಿತ ಬಿಡುವುದಿಲ್ಲ ಅಂತಾ ಅವಳ ಕುತ್ತಿಗೆಗೆ ಓಡ್ನಿಯಿಂದ ಬಿಗಿದು ಸುರುಳಿ ಸುತ್ತಿ ತಿರುವಿ ಜಗ್ಗಿ ಕೊಲೆ ಮಾಡಲು ಪ್ರಯತ್ನಿಸಿದ ಅಪರಾಧದ ಹಿನ್ನಲೆಯಲ್ಲಿ ಬನಹಟ್ಟಿ ಠಾಣೆ ಪ್ರಕರಣ ದಾಖಲಾಗಿರುತ್ತದೆ. ತನಿಖಾಧಿಕಾರಿ ಮತ್ತು ದಾಖಲಾಧಿಕಾರಿಗಳಾದ ಪಿ.ಎಸ್.ಐ ಸುರೇಶ ಮಂಟೂರ ತನಿಖೆ ಮಾಡಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ನಂತರ ಪ್ರಕರಣದ ವಿಚಾರಣೆ ನಡೆಸಿದ 1ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಮಹ್ಮದ ಇಮತಿಯಾಜ ಅಹ್ಮದ ಅವರು ಆರೋಪಿತನಾದ ಚಂದರಶೇಖರ ದುಂಡಪ್ಪ ಕಾಸರ ಇವನು ಪಿರ್ಯಾಧಿ ಹೆಂಡತಿ ಕೊಲೆ ಮಾಡಲು ಪ್ರಯತ್ನಿಸಿದ ಅಪರಾಧ ಸಾಬೀತಾಗಿದ್ದು,

ಆರೋಪಿತನಿಗೆ 3 ವರ್ಷ ಸಾದಾರಣ ಶಿಕ್ಷೆ ಮತ್ತು 10 ಸಾವಿರ ದಂಡ ವಿಧಿಸಿ ಶಿಕ್ಷೆ ನೀಡಿ ಆದೇಶಿಸಿದ್ದಾರೆ. ಪಿರ್ಯಾದಿದಾರರಿಗೆ ಕಾನೂನು ಸೇವಾ ಪ್ರಾಧಿಕಾರದಿಂದ ಪರಿಹಾರ ಹಣ ನೀಡಲು ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ಸರಕಾರಿ ಅಭಿಯೋಜಕರಾದ ಎಂ.ಐ.ಸಂಗತ್ರಾಶಹಾಗೂಜಿ.ಎಸ್.ಪಾಟೀಲ ವಾದವನ್ನು ಮಂಡಿಸಿದ್ದರು.

# ವಿದ್ಯಾಭ್ಯಾಸ ಸಾಲ ಸೌಲಭ್ಯಕ್ಕಾಗಿ ಅರ್ಜಿ

**ಬಾಗಲಕೋಟೆ :** ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಪ್ರಸಕ್ತ ಸಾಲಿಗೆ ಅರಿವು ಸಾಲ ಯೋಜನೆಯಡಿ ವಿದ್ಯಾಭ್ಯಾಸ ಸಾಲಕ್ಕಾಗಿ ಅಲ್ಪಸಂಖ್ಯಾತರ ಸಮುದಾಯದ ಮುಸ್ಲಿಂ, ಕ್ರೈಸ್ತರು, ಜೈನರು, ಭೌದ್ದ ಧರ್ಮಿಯರು, ಸಿಖ್ಖರು ಮತ್ತು ಪಾರ್ಸಿ ಜನಾಂಗದವರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಪರೀಕ್ಷಾ ಪ್ರಾಧಿಕಾರದಿಂದ ಸಿಇಟಿ, ಡಿ–ಸಿಇಟಿ, ಪಿಜಿ–ಸಿಇಟಿ, ಎನ್‌ಇಇಟಿ ಮೂಲಕ ಪದವಿ ಮತ್ತು ಸ್ನಾತ–ಕೋತ್ತರ ಕೋರ್ಸಗಳಾದ ವೈದ್ಯಕೀಯ, ದಂತವೈದ್ಯಕೀಯ, ಆಯುಷ, ಇಂಜಿನೀಯರಿಂಗ್ & ಟೆಕ್ನಾಲಜಿ ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್‌ಗಳಲ್ಲಿ ಆಯ್ಕೆಯಾಗಿರುವಂತಹ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಸಾಲ ಸೌಲಭ್ಯ ನೀಡಲಾಗುತ್ತದೆ. ಅರ್ಜಿ ಸಲ್ಲಿಸುವಾಗ ಹಿಂದಿನ ವರ್ಷದಲ್ಲಿ ಪಡೆದಿರುವ ಸಾಲದ ಮೊತ್ತ ಶೇ.12 ರಷ್ಟನ್ನು ಪಾವತಿಸಬೇಕಾಗಿರುತ್ತದೆ. ಅರ್ಜಿಯನ್ನು ವೆಬ್‌ಸೈಟ್ ನಲ್ಲಿ ಅಕ್ಟೋಬರ 31 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರು, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಜಿಲ್ಲಾಢಳಿತ ಭವನ, ನವನಗರ, ಬಾಗಲಕೋಟೆ, ದೂಸಂ.08354–236255 ಇವರನ್ನು ಸಂಪರ್ಕಿಸಬಹುದಾಗಿದೆ.

# ಪುರಸಭೆ ಅಧ್ಯಕ್ಷರಿಗೆ ಸನ್ಮಾನ



**ಮಹಾಲಿಂಗಪುರ :** ಪುರಸಭೆ ನೂತನ ಅಧ್ಯಕ್ಷ ಯಲ್ಲನಗೌಡ ಪಾಟೀಲ ಅವರನ್ನು ಮರಾಠ ಸಮಾಜದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಸಮಾಜದ ಅಧ್ಯಕ್ಷ ಮಹೇಶ ಜಾಧವ ಸೇರಿದಂತೆ ಹಿರಿಯರು, ಯುವಕರು ಇದ್ದರು.

## ಪ್ರೆಸ್ ಕ್ಲಬ್ ಕೌನ್ಸಿಲ್ ವತಿಯಿಂದ ನಾಲ್ಕನೇ ವರ್ಷದ ರಾಜ್ಯಮಟ್ಟದ ಪ್ರಶಸ್ತಿ ಪ್ರಧಾನ ಸಮಾರಂಭ

# ಮಣ್ಣೆ ಮೋಹನ್ ವಿರಚಿತ 'ಸ್ವಾತಂತ್ರ್ಯ ಹೋರಾಟದ ಕ್ರಾಂತಿ ಕಿಡಿಗಳು–2' ಕೃತಿಯ ಲೋಕಾರ್ಪಣೆ





**ಬೆಂಗಳೂರು :** "ರಾಜ ಮಹಾರಾಜರುಗಳು ಕಲೋಪಾಸಕರನ್ನ ಗುರುತಿಸಿ ಸಂಪ್ರದಾಯಬದ್ಧವಾಗಿ ಸನ್ಮಾನವನ್ನು ಮಾಡುತ್ತಿದ್ದರು. ಆದರೆ ಸರ್ಕಾರಗಳು ಬಂದ ಮೇಲೆ ಇವೆಲ್ಲ ನಿಂತು ಹೋಗಿವೆ. ಪುರ ಎಂದರೆ ಒಂದು ಗ್ರಾಮ ಅಥವಾ ಯಾವುದೇ ಒಂದು ಸ್ಥಳ. ಸ್ಕಾರ ಎಂದರೆ ಅವರ ಸಂಸ್ಕಾರ. ಹಾಗಾಗಿ ಒಂದು ಸ್ಥಳದಲ್ಲಿ ಅಥವಾ ಕ್ಷೇತ್ರದಲ್ಲಿರುವ ಸಂಸ್ಕಾರವಂತರನ್ನ ಗುರುತಿಸಿ ಸನ್ಮಾನಿಸುವುದಕ್ಕೆ ಪುರಸ್ಕಾರ ಎಂದು ಕರೆಯುತ್ತಾರೆ. ಪೂರ್ವಜನ್ಮದಲ್ಲಿ ನಾವು ಕಲಾವಿದನಿಗೆ ಅವಮಾನ ಅಥವಾ ನಿಂದನೆ ಮಾಡಿದ್ದರೆ ಈ ಜನ್ಮದಲ್ಲಿ ಅವಿದ್ಯಾವಂತರಾಗಿ ಹುಟ್ಟುತ್ತೇವೆ ಎಂದು ಗರುಡ ಪುರಾಣ ಹೇಳುತ್ತದೆ. ಇದರ ಪ್ರಾಯಶ್ಚಿತ್ತಕ್ಕಾಗಿ ನಾವು ಕಲಾವಿದರನ್ನು ಕರೆದು ವಸ್ತ್ರದಾನ, ಅನ್ನದಾನ ಮತ್ತು ಪುರಸ್ಕಾರಗಳನ್ನು ಮಾಡಬೇಕು. ಶಾಲು ಹೊದಿಸುವುದೇ ವಸ್ತ್ರದಾನ, ಫಲ–ತಾಂಬೂಲ ನೀಡುವುದೇ ಅನ್ನದಾನ, ಹೊಗಳಿಕೆಯೇ ಪುರಸ್ಕಾರ. ಇದೇ ಸನ್ಮಾನ ಮಾಡುವುದರ ಹಿಂದಿರುವ ಅರ್ಥ. ಕಲಾವಿದರಿಗೆ ಸನ್ಮಾನ ಮಾಡುವುದರಿಂದ ಅಶ್ವಮೇಧ ಯಾಗ ಮಾಡಿದಷ್ಟು ಪುಣ್ಯ ಲಭಿಸುತ್ತದೆ ಎಂದು ಕಾಳಿದಾಸನ ಜ್ಯೋತಿಷ್ಯ ಶಾಸ್ತ್ರ ಹೇಳುತ್ತದೆ. ಇಂತಹ ಪುಣ್ಯದ ಕೆಲಸ ಮಾಡುತ್ತಿರುವ ಪ್ರೆಸ್ ಕ್ಲಬ್ ಕೌನ್ಸಿಲ್ ಗೆ ಅಭಿನಂದನೆಗಳು. ಯುವಕರಲ್ಲಿ ಅನೇಕ ಪ್ರತಿಭಾವಂತರಿದ್ದಾರೆ, ವಿಕಲಚೇತನರಲ್ಲಿ ಅನೇಕರು ಪ್ರತಿಭಾವಂತರಿದ್ದಾರೆ. ಅವರನ್ನು ಮುಂದಿನ ದಿನಗಳಲ್ಲಿ ಗುರುತಿಸಿ ಸನ್ಮಾನಿಸಿ" ಎಂದು ಶ್ರೀ ಶಿರಡಿ ಸಾಯಿ ಭಿಕ್ಷಾ ಕೇಂದ್ರದ ಸಂಸ್ಥಾಪಕರು ಮತ್ತು ಚೇರ್ಮನ್ ಆದ ಡಾ ಲಕ್ಷ್ಮೀ ಶ್ರೀನಿವಾಸಗುರೂಜಿ ಅವರು ತಿಳಿಸಿದರು.

ರಾಘವೇಂದ್ರಚಾರ್ ನೇತೃತ್ವದ ಪ್ರೆಸ್ ಕ್ಲಬ್ ಕೌನ್ಸಿಲ್ ವತಿಯಿಂದ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜ ಪರಿಷತ್ ಮಂದಿರದಲ್ಲಿ ಪ್ರಾಯೋಜಿಸಲಾಗಿದ್ದ, ಪ್ರತಿಷ್ಠಿತ 'ಪ್ರೆಸ್ ಕ್ಲಬ್ ಕೌನ್ಸಿಲ್ ಅವಾರ್ಡ್–2024' ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇದೇ ಸಂದರ್ಭದಲ್ಲಿ ಲೇಖಕ ಮತ್ತು ಅಂಕಣಕಾರ ಮಣ್ಣೆ ಮೋಹನ್ ವಿರಚಿತ 'ಸ್ವಾತಂತ್ರ್ಯ ಹೋರಾಟದ ಕ್ರಾಂತಿ ಕಿಡಿಗಳು–2' ಕೃತಿಯನ್ನು ಲೋಕಾರ್ಪಣೆಗೊಳಿಸಲಾಯಿತು.

"ಭ್ರಷ್ಟಾಚಾರ, ಅನೈತಿಕತೆ, ಜಾತೀಯತೆ ಎಲ್ಲೆಲ್ಲೂ ತಾಂಡವವಾಡುತ್ತಿದೆ. ಆದರೂ ಸೈನಿಕ, ಶಿಕ್ಷಕ ಮತ್ತು ಅನ್ನದಾತ–ಈ ಮೂರು ಕ್ಷೇತ್ರಗಳು ಭ್ರಷ್ಟಾಚಾರದಿಂದ ಹೊರತಾಗಿವೆ. ಪ್ರಾತಃಸ್ಮರಣೀಯರ ಸಾಲಿನಲ್ಲಿ ಇವರನ್ನು ನೆನೆಯಬೇಕು. ಸೈನಿಕ ರಾಷ್ಟ್ರದ ರಕ್ಷಣೆ ಮಾಡಿದರೆ, ಶಿಕ್ಷಕ ರಾಷ್ಟ್ರದ ಏಳಿಗೆಗೆ ಕಾರಣನಾಗುತ್ತಾನೆ. ಅನ್ನದಾತ ಇಡೀ ರಾಷ್ಟ್ರಕ್ಕೆ ಅನ್ನ ನೀಡುತ್ತಾನೆ. "ಕರಾಗ್ರೆ ವಸತೇ ಲಕ್ಷ್ಮೀ ಕರಮಧ್ಯ ಸರಸ್ವತಿ ಕರಮೂಲೆ ಸ್ಥಿತೆಗೌರಿ ಪ್ರಭಾತೆ ಕರದರ್ಶನಂ" ಜೊತೆಗೆ "ಕರಾಗ್ರೆ ವಸತೇ ಸೈನಿಕ ಕರಮಧ್ಯ ಶಿಕ್ಷಕ ಕರಮೂಲೆ ಅನ್ನದಾತ ಪ್ರಭಾತೆ ಕರದರ್ಶನಂ" ಎಂದು ನಾವೆಲ್ಲರೂ ಪ್ರತಿದಿನ ನೆನೆಯೋಣ. ಮುಂದಿನ ತಲೆಮಾರಿಗೆ ಇದನ್ನು ಕಲಿಸಿಕೊಡದಿದ್ದರೆ ದೇಶ ಉಳಿಯುವುದಿಲ್ಲ. ಶಿಕ್ಷಣದ ಜೊತೆ ಸಂಸ್ಕಾರ ಕೊಟ್ಟರೆ ಮಾತ್ರ ಆದರ್ಶ ನಾಗರೀಕರಾಗುತ್ತಾರೆ. ಆಗ ದೇಶ ಉದ್ಧಾರವಾಗುತ್ತದೆ ಎಂದು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಾಧೀಶರಾದ ನ್ಯಾಯಮೂರ್ತಿ ಅರಳಿ ನಾಗರಾಜ್ ರವರು ತಿಳಿಸಿದರು.

"ಭ್ರಷ್ಟಾಚಾರ ಎಂಬುದು ನಮ್ಮ ದೇಶ, ರಾಜ್ಯದ ಅಭಿವೃದ್ಧಿಯನ್ನು ಹೇಗೆ ನುಂಗಿ ನೊಣೆಯುತ್ತಿದೆ ಎಂಬುದನ್ನು ನಾವು ಕಾಣುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಪ್ರೆಸ್ ಕ್ಲಬ್ ಕೌನ್ಸಿಲ್ ಸತ್ಯವನ್ನು ಹೇಳುವವರ ಪರ ನಿಲ್ಲುವ, ಸತ್ಯಕ್ಕಾಗಿ ಹೋರಾಡುವವರ ಬಗ್ಗೆ ಬರೆಯುವ,



ಎದುರಾಗುವ ಆತಂಕಗಳನ್ನು ನಿವಾರಿಸುವ ಜವಾಬ್ದಾರಿಯನ್ನು ಹೊತ್ತಿದೆ. ಪಕ್ಷಗಳು ಬದಲಾದಂತೆ ತಮ್ಮವರಿಗೆ ಮಾತ್ರ ಹುದ್ದೆ, ಪುರಸ್ಕಾರ ನೀಡುವ ಪರಿಪಾಠ ಬೆಳೆಯುತ್ತಿದೆ. ಸರ್ಕಾರದ ಮಾಧ್ಯಮ ಅಕಾಡೆಮಿಯಾಗಲಿ, ಪ್ರೆಸ್ ಕ್ಲಬ್ ಆಗಲಿ ಮಾಡಲಾಗದ ಕೆಲಸವನ್ನು ಪ್ರೆಸ್ ಕ್ಲಬ್ ಕೌನ್ಸಿಲ್ ಮಾಡುತ್ತಿದೆ" ಎಂದು ಸಾಹಿತಿ ಚಿಂತಕ ಲೇಖಕರಾದ ಬೈರಮಂಗಲ ರಾಮೇಗೌಡ ರವರು ತಿಳಿಸಿದರು.

"ಅನ್ಯಾಯ, ಅಕ್ರಮ, ಭ್ರಷ್ಟಾಚಾರದ ವಿರುದ್ಧದ ಹೋರಾಟವೇ ನಮ್ಮ ಧ್ಯೇಯ" ಎಂದು ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ರಾಜ್ಯಾಧ್ಯಕ್ಷರಾದ ರಾಘವೇಂದ್ರಚಾರ್ ಅವರು ತಿಳಿಸಿದರು.

"ನಾಗರೀಕ ಸಮಾಜದಲ್ಲಿ ಸಹ್ಯ ಬದುಕಿಗೆ ಸ್ವಾಸ್ಥ್ಯ ಸಮಾಜದ ನಿರ್ಮಾಣ ಬಹಳ ಮುಖ್ಯವಾದದ್ದು. ಸಮಾಜದ ಸ್ವಾಸ್ಥ್ಯ ಸಮಾಜದ ಬಗ್ಗೆ ಕಳಕಳಿ ಇರುವ ಸ್ವಾಸ್ಥ್ಯ ಮನಸ್ಸಿನವರಿಂದ ರೂಪುಗೊಳ್ಳುತ್ತದೆ. ಅಂತಹ ಮನಸ್ಸಿನವರನ್ನು ಗುರುತಿಸಿ ಪ್ರತಿ ವರ್ಷವೂ ಪ್ರತಿಷ್ಠಿತ ಪ್ರೆಸ್ ಕ್ಲಬ್ ಕೌನ್ಸಿಲ್ ಅವಾರ್ಡ್ ನೀಡುವ ಪರಿಪಾಠವನ್ನು ಪ್ರೆಸ್ ಕ್ಲಬ್ ಕೌನ್ಸಿಲ್ ಪಾಲಿಸುತ್ತಾ ಬಂದಿದೆ. ಇದು ಸಾಧಕರಿಗೆ ಪ್ರೋತ್ಸಾಹವನ್ನು ಮತ್ತು ಸಾಧಿಸುವವರಿಗೆ ಸ್ಪೂರ್ತಿಯನ್ನು ನೀಡುತ್ತದೆ. ಈ ಮೂಲಕ ಕಳೆದ ನಾಲ್ಕು ವರ್ಷಗಳಿಂದ ಪ್ರೆಸ್ ಕ್ಲಬ್ ಕೌನ್ಸಿಲ್ ಸ್ವಾಸ್ಥ್ಯ ಸಮಾಜದ ನಿರ್ಮಾಣದಲ್ಲಿ ಬಹುಮುಖ್ಯ ಪಾತ್ರವಹಿಸಿದೆ" ಎಂದು ಲೇಖಕ ಮತ್ತು ಅಂಕಣಕಾರ ಮಣ್ಣೆ ಮೋಹನ್ ರವರು ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ತಿಳಿಸಿದರು.

"ಅನ್ಯಾಯ, ಅಕ್ರಮದ ವಿರುದ್ಧದ ನಮ್ಮ ಹೋರಾಟ ನಿರಂತರವಾದದ್ದು, ನಮ್ಮ ಹೋರಾಟಕ್ಕೆ ಕೈಜೋಡಿಸಿ ಬಲ ತುಂಬಿದ್ದು ಪ್ರೆಸ್ ಕ್ಲಬ್ ಕೌನ್ಸಿಲ್ ಅಧ್ಯಕ್ಷರಾದ ರಾಘವೇಂದ್ರಚಾರ್. ಹಾಗಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ" ಎಂದು ಸತ್ಯಮೇವ ಜಯತೆ ಸಂಘಟನೆಗಳ ಒಕ್ಕೂಟ ಮತ್ತು ನಾಗರೀಕ ಸೇವಾ ಟ್ರಸ್ಟ್ ನ ಸೋಮನಾಥ ನಾಯಕ್ ತಿಳಿಸಿದರು.

"ನಮ್ಮಲ್ಲಿ ಪ್ರಶ್ನಿಸುವ ಮನೋಭಾವ ಇಲ್ಲದ್ದರಿಂದ ದೇಶದ ಅನೇಕ ಸಮಸ್ಯೆಗಳಿಗೆ ಕಾರಣವಾಗಿದೆ. ಆದ್ದರಿಂದ ಯುವ ಜನತೆಯಲ್ಲಿ ಪ್ರಶ್ನಿಸುವ ಮನೋಭಾವವನ್ನು ಬೆಳೆಸಬೇಕಿದೆ. 2003 ರಲ್ಲಿ ನಡೆದ ಭಾನಾಮತಿ ಘಟನೆಯೊಂದರಿಂದ ಬೇಸತ್ತು ನನ್ನ ಕೆಲಸಕ್ಕೆ ರಾಜೀನಾಮೆ ನೀಡಿ, ಅಂದಿನಿಂದ ಇಂದಿನವರೆಗೂ ಇದಕ್ಕಾಗಿ ಶ್ರಮಿಸುತ್ತಿರುವೆ" ಎಂದು ವಿಚಾರವಾದಿ ಸಂಘಟನೆಗಳ ರಾಷ್ಟ್ರೀಯ ಒಕ್ಕೂಟದ ಅಧ್ಯಕ್ಷರಾದ ಡಾ ನರೇಂದ್ರನಾಯಕ್ ತಿಳಿಸಿದರು.

"ಪ್ರೆಸ್ ಕ್ಲಬ್ ಕೌನ್ಸಿಲ್ ನಮ್ಮನ್ನೆಲ್ಲಾ ಸನ್ಮಾನ ಮಾಡುತ್ತಿದೆ ಎಂದರೆ ಸಮಾಜದ ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕೆ ನಮ್ಮನ್ನು ಕೈಜೋಡಿಸಲು ಆಹ್ವಾನಿಸುತ್ತಿದೆ ಎಂದರ್ಥ" ಎಂದು ಪ್ರಶಸ್ತಿ ಪುರಸ್ಕೃತರ ಪರವಾಗಿ ಮಾತನಾಡಿದ, ವಿಶ್ವವಾಣಿ ಪತ್ರಿಕೆಯ ನ್ಯೂಸ್ ಎಡಿಟರ್ ಶಿವಕುಮಾರ್ ಬೆಳ್ಳಿತಟ್ಟೆ ಹೇಳಿದರು.

"ಪರಿಪೂರ್ಣವಾಗಿ ನಟನೆಯನ್ನು ಕಲಿತು, ನವರಸಗಳನ್ನು ಅಭ್ಯಾಸ ಮಾಡಿದರೆ ಮಾತ್ರ ನಾವು ಹೆಚ್ಚು ಕಾಲ ಕಲಾವಿದರಾಗಿ ಅಸ್ತಿತ್ವದಲ್ಲಿರಲು ಸಾಧ್ಯ" ಎಂದು ಚಿತ್ರನಟ ಹಾಗೂ ಹಾಸ್ಯ ಕಲಾವಿದರಾದ ಶಿವರಾಜ್ ಕೆ ಆರ್ ಪೇಟೆ ಹೇಳಿದರು.

ಪ್ರತಿಷ್ಠಿತ 'ಪ್ರೆಸ್ ಕ್ಲಬ್ ಕೌನ್ಸಿಲ್ ಅವಾರ್ಡ್ 2024' ಅನ್ನು ಡಾ| ನರೇಂದ್ರ ನಾಯಕ್ ಅಧ್ಯಕ್ಷರು, ಭಾರತೀಯ ವಿಚಾರವಾದಿ ಸಂಘಗಳ ಒಕ್ಕೂಟ; ಶಿವಕುಮಾರ್ ಬೆಳ್ಳಿತಟ್ಟೆ, ನ್ಯೂಸ್ ಎಡಿಟರ್, ವಿಶ್ವವಾಣಿ ಪತ್ರಿಕೆ; ರಕ್ಷಿತ್ ಶೆಟ್ಟಿ, ಸಹಾಯಕ ಸಂಪಾದಕರು, ನ್ಯೂಸ್ ಫಸ್ಟ್; ಶಿವಾನಂದ್ ಬಿರಾದಾರ್, ವಕೀಲರು, ಹೈಕೋರ್ಟ್, ಬೆಂ.; ಲೋಹಿತ್ ಬಿ ಎನ್, ಇನ್ಸ್ಪೆಕ್ಟರ್, ತುರುವೆಕೆರೆ; ಡಾ. ಈಶ್ವರಿ ಎಲ್, ಚರ್ಮರೋಗ ತಜ್ಞರು, ವಿಕ್ಟೋರಿಯ ಆಸ್ಪತ್ರೆ; ಶಿವರಾಜ್, ಕೆ.ಆರ್.ಪೇಟೆ, ಚಿತ್ರನಟ, ಹಾಸ್ಯ ಕಲಾವಿದರು; ನಾರಾಯಣ ಗೌಡ, ಅಡಿಷನಲ್ ಡೈರೆಕ್ಟರ್, ಬಿಡಿಎ; ರಿಯಾಜ್‌ಉಲ್ಲಾ ಷರೀಫ್ ವಕೀಲರು, ಬೆಂ. ಇವರಿಗೆ ನೀಡಿ ಸನ್ಮಾನಿಸಲಾಯಿತು.

ಪ್ರೆಸ್ ಕ್ಲಬ್ ಕೌನ್ಸಿಲ್ ರಾಜ್ಯಾಧ್ಯಕ್ಷರಾದ ರಾಘವೇಂದ್ರಚಾರ್; ಆಶಾ, ಪ್ರೆಸ್ ಕ್ಲಬ್ ಕೌನ್ಸಿಲ್ ಪ್ರಧಾನ ಕಾರ್ಯದರ್ಶಿ ; ಶರತ್, ಚಲನಚಿತ್ರ ನಿರ್ದೇಶಕರು; ಲೋಕೇಶ್, ವಕೀಲರು, ಲೀಗಲ್ ಕಾನ್ಲೇವ್, ಆರ್.ಪಿ. ಸಿ. ಲೇಔಟ್, ಬೆಂ.; ನಾಗೇಂದ್ರ, ವಕೀಲರು. ಹೈಕೋರ್ಟ್, ಬೆಂ.; ಜೆ.ಎಸ್. ನಾಗರಾಜು, ಪ್ರಾಂಶುಪಾಲರು, ಶ್ರೀ ಮಂಜುನಾಥ ವಿದ್ಯಾಲಯ, ಮಾಗಡಿ ರಸ್ತೆ, ಬೆಂ.; ಲಿಂಗರಾಜ್ ಗೌಡ, ಕಾನ್ಕರ್ಡ್ ಗ್ರೂಪ್, ಬೆಂ.; ವೇಣು, ಉದ್ಯಮಿ, ಮೈಸೂರು; ಗುರುಪ್ರಸಾದ್, ವಕೀಲರು, ಉಪಾಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್, ಮಂಡ್ಯ; ನಾಗೇಶ್, ವ್ಯವಸ್ಥಾಪಕ ನಿರ್ದೇಶಕ, ಶ್ರೀ ಎಂಟರ್ ಪ್ರೈಸಸ್ (ಗ್ರಿಟ್ ಬ್ಲಾಸ್ಟಿಂಗ್) ಬೆಂ; ಪ್ರಶಾಂತ್ ಪಿ ಆರ್ ಎಸ್, ಸಂಪಾದಕರು, ಹೂಮನ್ ರೈಟ್ಸ್ ನ್ಯೂಸ್ ವರ್ಲ್ಡ್, ಕುಂದಾಪುರ; ಅನಿಲ್ ಕುಮಾರ್, ರಾಜ್ಯಾಧ್ಯಕ್ಷ, ಕರವೇ ಕನ್ನಡಿಗರ ಧ್ವನಿ; ಡಾ. ಶಿವಕುಮಾರ್, ಸರ್ಜನ್ ಮುಖ್ಯ ಆರೋಗ್ಯಾಧಿಕಾರಿ, ವಿಕ್ಟೋರಿಯಾ ಆಸ್ಪತ್ರೆ, ಬೆಂ.; ಡಾ. ಶಂಕರ್, ಎಂ.ಬಿ.ಬಿ.ಎಸ್. ವಿಕ್ಟೋರಿಯಾ ಆಸ್ಪತ್ರೆ, ಬೆಂ.–ಮುಂತಾದವರು ಉಪಸ್ಥಿತರಿದ್ದರು.

ವಿಜಯ ಹೊಸ ಪಾಳ್ಯ ರವರು ಕಾರ್ಯಕ್ರಮವನ್ನು ನಿರೂಪಣೆ ಮಾಡಿದರು. ಜಿಲ್ಲಾ ಮತ್ತು ತಾಲೂಕು ಘಟಕಗಳ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು. ವರನಟ ಡಾ ರಾಜಕುಮಾರ್ ರವರ ಸಂಭಾಷಣೆ ಮತ್ತು ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿದ ಜೂನಿಯರ್ ರಾಜಕುಮಾರ್ ರವರ ಮನೋರಂಜನ ಕಾರ್ಯಕ್ರಮ ಮನ ಸೆಳೆಯಿತು. ಕಾರ್ಯಕ್ರಮಕ್ಕೆ ಮುಸ್ಸಂಜೆ ಸಮಯ, ಅಮೃತಘಳಿಗೆ, ಚಾಮುಂಡಿ ನ್ಯೂಸ್, ಕನ್ನಡಿಗರ ಆಲದಮರ, ಫೋಕಸ್ 19– ಇವರುಗಳ ಸಹಯೋಗವಿತ್ತು.

**ವರದಿ: ಮಣ್ಣೆ ಮೋಹನ್**

# ತೇರದಾಳ ಕ್ಷೇತ್ರದಲ್ಲಿ 'ಕೈ' ಮತ್ತಷ್ಟು ಬಲವರ್ಧನೆಯಾಗುತ್ತಿದೆ

**ರಬಕವಿ-ಬನಹಟ್ಟಿ :** ತೇರದಾಳ ವಿಧಾನಸಭಾ ಕ್ಷೇತ್ರಾದ್ಯಂತ ಕಾಂಗ್ರೆಸ್ ಪಕ್ಷವು ಮತ್ತಷ್ಟು ಬಲವರ್ಧನೆಯಾಗುತ್ತಿದ್ದು, ಹಾಲಿ ಶಾಸಕರ ದುರಾಡಳಿತಕ್ಕೆ ಬೇಸತ್ತು ಇದೀಗ ಬಿಜೆಪಿ ಹಾಲಿ ಸದಸ್ಯರು, ಮುಖಂಡರುಗಳು ಕಾಂಗ್ರೆಸ್ಸಿನತ್ತ ವಾಲಿರುವುದೇ ತಾಜಾ ಸಾಕ್ಷಿಯಾಗಿದೆ ಎಂದು ಕ್ಷೇತ್ರದ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ತಿಳಿಸಿದರು.

ಬನಹಟ್ಟಿಯ ಕಾಂಗ್ರೆಸ್ ಪಕ್ಷದ ಕಾರ್ಯಾಲಯದಲ್ಲಿ ಅಲ್ಪಸಂಖ್ಯಾತ ಮುಖಂಡರ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನಿರೀಕ್ಷೆ ಮೀರಿ ಬದಲಾವಣೆಯಾಗಿದೆ. ಈಚೆಗೆ ಮಹಾಲಿಂಗಪೂರ ಹಾಗು ತೇರದಾಳ ಪುರಸಭೆಗಳು ಕಾಂಗ್ರೆಸ್ 'ಕೈ'ವಶವಾಗಿರುವುದು ವಿಶೇಷ. ನಿರೀಕ್ಷೆಗೂ ಮೀರಿ ಕಾಂಗ್ರೆಸ್ನ ಶಕ್ತಿ ಹಾಗು ರಾಜ್ಯದ ಮುಖ್ಯಮಂತ್ರಿ ಆಗಿರುವ ಸಿದ್ರಾಮಯ್ಯನವರ ಕಾರ್ಯಕ್ಷಮತೆ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಭಾವ ಬೀರುವಲ್ಲಿ ಯಶಸ್ವಿಯಾಗಿದೆ. ಅಲ್ಲದೆ ಬಿಜೆಪಿ ಸದಸ್ಯರೇ ಸ್ವಯಂಪ್ರೇರಿತವಾಗಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲಿಸಿ ಆಡಳಿತ




ನಿರ್ವಹಣೆಗೆ ಅವಕಾಶ ಕೊಟ್ಟಿರುವದಕ್ಕೆ ಕೊಣ್ಣೂರ ಅಭಿನಂದಿಸಿದರು.

ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ ಮಾತನಾಡಿ, ಜಿಲ್ಲೆಯಾದ್ಯಂತ ಪಕ್ಷ ಬಲವರ್ಧನೆಗೆ ಎಂದಿಗೂ ಹಿಂಜರೆದಿಲ್ಲ. ಕಳೆದ ಲೋಕಸಭೆ ಚುನಾವಣೆಗೆ ಅಭ್ಯರ್ಥಿ ಆಯ್ಕೆಯಲ್ಲಿ ತನ್ನನ್ನು ಬಿಟ್ಟು ಬೇರೆಯವರಿಗೆ ಟಿಕೆಟ್ ನೀಡಿದ್ದಕ್ಕೆ ಅಸಮಾಧನವಿಲ್ಲ. ಅದೆಲ್ಲವನ್ನು ಬಿಟ್ಟು ಪಕ್ಷದ ಬಲಿಷ್ಠತೆಗೆ ಹಾಗು ಸಂಘಟನೆಗೆ ನಿರಂತರ ಸೇವೆ ನಮ್ಮದಾಗ ಬೇಕೆಂದರು. ಟಿಕೆಟ್ ಯಾರಿಗೇ ನೀಡಲಿ ಪಕ್ಷದಲ್ಲಿ ಪ್ರಾಮಾಣಿಕ ದುಡಿಮೆ ಪ್ರತಿಯೊಬ್ಬರ ದ್ದಾಗಬೇಕು. ಮುಂದಿನ ಚುನಾವಣೆಗಳನ್ನು ದಿಕ್ಸೂಚಿಯನ್ನಾಗಿಸಿಕೊಂಡು ಗಮನಹರಿಸಿ ಪಕ್ಷದಲ್ಲಿ ದುಡಿಯಬೇಕು. ಅಲ್ಲದೆ ರಾಜ್ಯ ಸರ್ಕಾರ ನೀಡಿದ ಪಂಚ ಗ್ಯಾರಂಟಿಗಳ ಆಶೀರ್ವಾದ ಪ್ರತಿಯೊಬ್ಬ ಮತದಾರದ್ದಿದೆ. ಇದನ್ನು ಸದ್ಬಳಕೆ ಮಾಡಿಕೊಂಡು ಮುನ್ನಡೆಯಬೇಕೆಂದು ಕಾಶಪ್ಪನವರ ತಿಳಿಸಿದರು.

ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಎಂ. ಬಿ. ಸೌದಾಗರ, ಭೀಮಶಿ ಮಗದುಮ್, ರಾಜು ಭದ್ರನ್ನವರ, ನಶೀಮ ಮೊಕಾಶಿ, ಹಾರುನ ಬೇವೂರ, ಇರ್ಷಾದ್ ಮೋಮಿನ್, ಬುಡಾನಸಾಬ ಜಮಾದಾರ, ಯೂನಸ್ ನಿಪ್ಪಾಣಿ, ರಫೀಕ್ ಬೇಪಾರಿ, ಶಾನೂರ ಮಾಲದಾರ, ಸೈಫಲಿ ಭಾಗವಾನ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಕಾಂಗ್ರೆಸ್ ಪದಾಧಿಕಾರಿಗಳ ಆಯ್ಕೆ

**ರಬಕವಿ-ಬನಹಟ್ಟಿ :** ತೇರದಾಳ ವಿಧಾನ ಸಭಾ ಮತ ಕ್ಷೇತ್ರದ ರಬಕವಿ-ಬನಹಟ್ಟಿ, ಮಹಾಲಿಂಗಪೂರ ನಗರ ಘಟಕದ ಅಲ್ಪಸಂಖ್ಯಾತ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರನ್ನು ನೇಮಕ ಮಾಡಲಾಯಿತು.

ಕ್ಷೇತ್ರದ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರಾಗಿ ಇರ್ಷಾದ್ ಮೋಮಿನ್, ರಬಕವಿ-ಬನಹಟ್ಟಿ ಘಟಕದಿಂದ



ಶಾಹನೂರ ಮಾಲದಾರ ಹಾಗು ಮಹಾಲಿಂಗಪೂರ ಬ್ಲಾಕ್ ಅಧ್ಯಕ್ಷರಾಗಿ ಸೈಫಲಿ ಬಾಗವಾನ ಆಯ್ಕೆಗೊಂಡರು. ಉಪಾಧ್ಯಕ್ಷರಾಗಿ ಅಲ್ತಾಫ್ ಶೇಖ, ಯಾಸೀನ್ ಪೆಂಢಾ ರಿ, ತೌಫೀಕ್ ಅತ್ತಾರ, ತಾಹೀರಹುಸೇನ್ ಸೌದಾಗರ, ಕಾರ್ಯದರ್ಶಿಯಾಗಿ ರಂ ಜಾನ ಹೊರಟ್ಟಿ ಹಾಗು ರಶೀದಅಹ್ಮದ್ ತಾಂಬೋಳಿ ಆಯ್ಕೆಗೊಂಡಿದ್ದಾರೆ.

# ವಿವಿಧ ವಸತಿ ಶಾಲೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸನ್ಮಾನ




**ಬಾದಾಮಿ :** ವಿದ್ಯಾರ್ಥಿಗಳು ಉತ್ತಮ ಮೌಲ್ಯಗಳನ್ನು ಬೆಳೆಸಿಕೊಳ್ಳ ಬೇಕು ಶ್ರದ್ದೆಯಿಂದ ಓದಿ ಮುಂದಿನ ಭವಿಷ್ಯ ರೂಪಿಸಿಕೊಳ್ಳಿ ನಾವು ಸದಾ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬೆನ್ನಲುಬಾಗಿ ನಿಲ್ಲುತ್ತೇನೆ ಎಂದು ಯುವ ರಾಜಕಾರಣಿ ರಂಗನಗೌಡ ಗೌಡರ ಹೇಳಿದರು. ಅವರು ನಗರದ ಖಾಸಗಿ ತರಬೇತಿ ಕೇಂದ್ರದ ವತಿಯಿಂದ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ವಿವಿಧ ವಸತಿ ಶಾಲೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಭಾಘವಹಿಸಿ ಮಾತನಾಡಿದರು, ಪ್ರೋ. ಶಶಿಧರ್ ಎಸ್ ಮೂಲಿಮನಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಕ್ಕಳ ಯಾವ ರೀತಿ ತಯಾರುಮಾಡಬೇಕು ಮತ್ತು ಯಾವ ಯಾವ ಹಂತದಲ್ಲಿ ಅವರಿಗೆ ಪೋಷಕರು ಯಾವ ರೀತಿ ಪ್ರೋತ್ಸಾಹ ನೀಡಬೇಕು ಎಂಬುವುದರ ಬಗ್ಗೆ ಪೋಷಕರಿಗೆ ಅರಿವು ಮೂಡಿಸಿದರು. ತರಬೇತಿ ಕೇಂದ್ರದ ಸಂಚಾಲಕರು ಹಾಗೂ ತರಬೇತಿದಾರ ವೆಂಕಟೇಶ್ ರಾಠೋಡ್ ಅವರು ಮಾತನಾಡಿ ಬಾದಾಮಿ ನಗರದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟ ಶಿಕ್ಷಣ ದೊರೆಯಬೇಕು. ಎಂಬುವುದು ನಮ್ಮ ದ್ಯಯವಾಗಿದೆ ಎಂದರು.

ತರಬೇತಿ ಶಿಕ್ಷಕಿಯರಾದ ಶ್ರುತಿ ರಾಠೋಡ್, ಅಶ್ವಿನಿ ಕಪಲಿ, ಶ್ವೇತಾ ಶಿವಸಿಂಪಿಗೆರ, ಪ್ರತಿಭಾ ಚನ್ನಪ್ಪಗೌಡರ. ಹಾಗೂ ಪೋಷಕರು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಹಿರೇಮಠದಲ್ಲಿ ಶ್ರಾವಣ ಮಾಸದ ಪೂಜಾ ಮಂಗಳ ಹಾಗೂ ಅನೇಕ ಮಹನೀಯರಿಗೆ ಸನ್ಮಾನ

# ಮಠಗಳು ಸಂಸ್ಕಾರ ಕಲಿಸುವ ಶ್ರದ್ಧಾ ಕೇಂದ್ರ: ಗದ್ದಿಗೌಡರ

**ಲೋಕಾಪುರ :** ಪ್ರತಿಯೊಬ್ಬ ವ್ಯಕ್ತಿಯ ಬೆಳವಣೆಗೆಯಲ್ಲಿ ಸಂಸ್ಕಾರ ಮತ್ತು ಶಿಕ್ಷಣ ಪ್ರಮುಖವಾಗಿವೆ, ಸಂಸ್ಕಾರವಿಲ್ಲದೆ ಶಿಕ್ಷಣ ನಿರರ್ಥಕ, ಮಠ-ಮಾನ್ಯಗಳು ಧಾರ್ಮಿಕ ಸೇವೆಯೊಂದಿಗೆ ಸಂಸ್ಕಾರವನ್ನು ಕಲಿಸುತ್ತವೆ ಹೀಗಾಗಿ ಮಠಮಾನ್ಯಗಳು ಸಂಸ್ಕಾರ ನೀಡುವ ಶ್ರದ್ಧಾ ಕೇಂದ್ರಗಳು ಎಂದು ಬಾಗಲಕೋಟ ಸಂಸದ ಪಿ.ಸಿ.ಗದ್ದಿಗೌಡರ ಆಭಿಪ್ರಾಯಪಟ್ಟರು.

ಪಟ್ಟಣದ ಹಿರೇಮಠದಲ್ಲಿ ಶ್ರಾವಣ ಮಾಸದ ಪೂಜಾ ಮಂಗಳ ಹಾಗೂ ಅನೇಕ ಮಹನೀಯರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ದೇಶದ ಬಹುತೇಕ ಸಾಧಕರ ಹಿಂದೆ ಮಠಗಳ ಸಂಸ್ಕಾರವಿದೆ, ಮಠ ಮಾನ್ಯಗಳು ಸಂಸ್ಕಾರ ನೀಡಿ ಆದರ್ಶ ವ್ಯಕ್ತಿಯನ್ನಾಗಿ ರೂಪಿಸುತ್ತಿವೆ,

ಇದಕ್ಕೆ ನಾನು ಸೇರಿದಂತೆ ಅನೇಕರ ಉದಾಹರಣೆ ಇದೆ, ಹೀಗಾಗಿ ನಮ್ಮ ಸನಾತನ ಪರಂಪರೆಯಲ್ಲಿ ಮಠಗಳಿಗೆ



ಹೆಚ್ಚಿನ ಆದ್ಯತೆ ಇದೆ ಎಂದರು.

ಹಿರೇಮಠದ ಡಾ. ಚಂದ್ರಶೇಖರ ಸ್ವಾಮೀಜಿ ಮಾತನಾಡಿ ಧರ್ಮ, ಸಾಹಿತ್ಯ, ಸಂಸ್ಕಾರ ಮೈಗೂಡಿಸಿಕೊಂಡಿರುವ ಕನ್ನಡ ನಾಡಿನ ಮಠಗಳು ಮಾನವತೆಯ ಮಹಾ ಮಂದಿರಗಳಾಗಿವೆ, ಲೋಕೋದ್ಧಾರ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಮಠಗಳ ಮತ್ತು ಮಠಾಧಿಪತಿಗಳನ್ನು ಉದಾಸೀನ ಮಾಡಿದರೆ ಸಾಮಾಜಿಕ ಸೇವಾ ಕಾರ್ಯಕ್ಕೆ ತೊಡಕುಂಟಾಗಲಿದೆ, ಮಠಗಳನ್ನು ರಕ್ಷಿಸಿಕೊಳ್ಳುವ ಮೂಲಕ ಸಮಾಜೋದ್ಧಾರ ಕಾಯಕ ಪರಂಪತೆ ಮುಂದುವರೆಸಿಕೊಂಡು ಹೋಗುವ ಅನಿವಾರ್ಯತೆ ಸೃಷ್ಠಿಯಾಘಿದೆ ಎಂದು ಹೇಳಿದ ಅವರು ಸಮಾಜ ಮತ್ತು ಸದ್ಭಕ್ತರು ಮಠಗಳ ಉಳಿವಿಗೆ ಕಾಳಜಿ ವಹಿಸಬೇಕಿದೆ ಎಂದರು.

ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಂಘಗಳ ಮಹಾಮಂಡಳದ ಉಪಾಧ್ಯಕ್ಷ ಕಾಶಿನಾಥ ಹುಡೇದ, ಪಿಕೆಪಿಎಸ್ ಅಧ್ಯಕ್ಷ ಹೊಳಬಸು ಕಾಸರ, ಅಂಜುಮನ್ ಇಸ್ಲಾಂ ಕಮೀಟಿ ಅಧ್ಯಕ್ಷ ರಫೀಕ ಭೈರಕದಾರ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಗುಣಾಕರ ಶೆಟ್ಟಿ, ಅಲ್ಲಾಸಾಬ ಯಾದವಾಡ, ಶಿವರುದ್ರಯ್ಯ ವಜ್ರಮಟ್ಟಿ, ಡಾ. ಆರ್.ವ್ಹಿ. ಪಾಟೀಲ ಅವರನ್ನು ಹಿರೇಮಠದಿಂದ ಸನ್ಮಾನಿಸಲಾಯಿತು.


ಈ ವೇಳೆ ಎಲ್.ಸಿ.ಉದಪುಡಿ, ಡಿ.ಎಂ. ತೆಗ್ಗಿ, ಎಸ್.ಎನ್.ಹಿರೇಮಠ, ಆರ್. ಕೆ.ಮಠದ, ಲೋಕಣ್ಣ ಕತ್ತಿ, ಶಂಕರ ತೇಲಿ, ಪ್ರಕಾಶ ಚುಳಕಿ, ಸದಾಶಿವ ನಾವ್ಹಿ, ಸಂಕಪ್ಪ ಗಂಗಣ್ಣವರ, ಶಿವಪ್ಪ ಚೌಧರಿ, ಅರುಣ ಕಟಗೇರಿ ಅಪಾರ ಹಿರೇಮಠದ ಭಕ್ತವೃಂದ ಇದ್ದರು.

# ನಾಭಿಕ ಸಮುದಾಯಭವನ ನಿರ್ಮಾಣಕ್ಕೆ ಶಾಸಕರಿಂದ ಚಾಲನೆ

**ಜಮಖಂಡಿ :** ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ 7ಲಕ್ಷ ವೆಚ್ಚದಲ್ಲಿ ನಗರದ ವಾರ್ಡ ನಂ5 ರಲ್ಲಿ ಕೃಷ್ಣಪೂರ ಗಲ್ಲಿಯಲ್ಲಿ ನಿರ್ಮಾಣವಾಗುತ್ತಿರುವ ನಾಭಿಕ ಸಮಾಜದ ಶ್ರೀಸಂತ ಸೇನಾಮಹಾರಾಜ ಸಮುದಾಯ ಭವನದ ಭೂಮಿ ಪೂಜಾ ಕಾರ್ಯಕ್ರಮಕ್ಕೆ ಶಾಸಕ ಜಗದೀಶ ಗುಡಗುಂಟಿ ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿ ಭೂಷಣ ಮಹಾರಾಜರು, ನಿವೃತ್ತಿ ಸಬಕಾಳೆ, ತುಕಾರಾಮ ಸಬಕಾಳೆ, ಮಹೇಶ ಸಬಕಾಳೆ, ಸುಭಾಷ, ಸಿದ್ದುಪವಾರ, ಉಮೇಶ ಇಂಗಳೆ, ಸಂಜು ಜಾದವ, ವಿನಾಯಕ ಪವಾರ, ಯಶವಂತ ಮಾನೆ, ಗೀತಾ ಸೂರ್ಯವಂಶಿ, ಸಂತೋಷ ಭೋಸಲೆ, ಅಜಯ ಕಡಪಟ್ಟಿ, ಗಣೇಶ ಶಿರಗಣ್ಣವರ, ಶಂಕರ ಕಾಳೆ ಸಹಿತ ಹಲವರು ಇದ್ದರು.

# ಗಣೇಶ ವಿಸರ್ಜನೆಗೆ ಸಂಚಾರಿ ತೊಟ್ಟಿಗಳ ವ್ಯವಸ್ಥೆ



**ಬಾಗಲಕೋಟೆ :** ಬಾಗಲಕೋಟೆ ನಗರ ಪ್ರದೇಶದಲ್ಲಿ ಗಣೇಶ ಪ್ರತಿಷ್ಠಾಪನೆ ಮೊದನ ದಿನ ಹಾಗೂ ಐದನೇ ದಿನ ಸೆಪ್ಟೆಂಬರ 11 ರಂದು ಗಣೇಶ ಮೂರ್ತಿ ವಿಸರ್ಜನೆಗೆ 5 ಕಡೆಗಳಲ್ಲಿ ಸಂಚಾರಿ ತೊಟ್ಟಿಗಳ ವ್ಯವಸ್ಥೆ ಮಾಡಲಾಗಿದೆ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನೆಯಲ್ಲಿ ಸ್ಥಾಪಿಸಲಾದ ಗಣೇಶ ಮೂರ್ತಿಗಳ ವಿಸರ್ಜನೆಗೆ ಹಳೆ ಬಾಗಲಕೋಟೆಯ ಕಿಲ್ಲಾ ಓಣಿ, ನವನಗರದ ಸೆಕ್ಟರ ನಂ.57ರ ಹೆಚ್.ಪಿ.ಪೆಟ್ರೋಲ್ ಪಂಪ್ ಹತ್ತಿರ, ನವನಗರದ ಎಲ್.ಐ.ಸಿ ಸರ್ಕಲ್, ವಿದ್ಯಾಗಿ-ರಿಯ ಬಸ್ ನಿಲ್ದಾಣ ರಸ್ತೆ ಹಾಗೂ ನವನಗರದ ಕಾಳಿದಾಸ ಸರ್ಕಲ್‌ನಲ್ಲಿ ಸಂಜೆ 6 ರಿಂದ ರಾತ್ರಿ 10 ಗಂಟೆವರೆಗೆ ಸಂಚಾರಿ ತೊಟ್ಟಿಗಳ ವ್ಯವಸ್ಥೆ ಮಾಡಲಾಗಿದೆ.

ಸಾರ್ವಜನಿಕರು ಗಣೇಶ ಮೂರ್ತಿಗಳನ್ನು ಜಲಮೂಲಗಳಲ್ಲಿ ವಿಸರ್ಜಸದೇ ಜಲಮಾಲಿನ್ಯ ತಡೆಯಲು ನೆರವಾಗುವಂತೆ ಸಂಚಾರಿ ತೊಟ್ಟಿಗಳಲ್ಲಿಯೇ ವಿಸರ್ಜಿಸುವಂತೆ ಪರಿಸರ ಅಧಿಕಾರಿಗಳು ತಿಳಿಸಿದ್ದಾರೆ.

# ಕ್ರೀಡೆಗಳು ದೇಹಕ್ಕೆ ವಿಟಮಿನ್ ಇದ್ದಂತೆ: ಬಿಇಓ ಬಸಣ್ಣವರ

**ಜಮಖಂಡಿ :** ಪರಿಪೂರ್ಣವಾಗಿ ಆರೋಗ್ಯವಂತರಾಗಿರಲು ದೇಹಕ್ಕೆಎಲ್ಲತರಹದ ವಿಟಮಿನ್‌ಗಳು ಅಗತ್ಯ. ಆ ನಿಟ್ಟಿನಲ್ಲಿ ಕ್ರೀಡೆಗಳು ವಿಟಮಿನ್‌ನಂತೆ ಕೆಲಸ ಮಾಡುತ್ತವೆಎಂದುಕ್ಷೇತ್ರ ಶಿಕ್ಷಣಾಧಿಕಾರಿ ಎ.ಕೆ.ಬಸಣ್ಣವರ ಹೇಳಿದರು.

ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಬಸವಜ್ಯೋತಿಆಂಗ್ಲ ಮಾಧ್ಯಮ ಶಾಲೆಗಳ ಆಶ್ರಯದಲ್ಲಿ ಆಯೋಜಿಸಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ 2024-25ನೇ ಸಾಲಿನ ಬಾಲಕ-ಬಾಲಕಿಯರಜಮಖಂಡಿ ನಗರ ಪೂರ್ವ ವಲಯ ಮಟ್ಟದಕ್ರೀಡಾಕೂಟವನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ಜಾತಿ, ಮತ, ಬಡವ, ಶ್ರೀಮಂತ, ಹೆಣ್ಣು ಮತ್ತುಗಂಡು ಎಂಬ ತಾರತಮ್ಯಗಳನ್ನು ತೊಡೆದು ಹಾಕಲು ಕ್ರೀಡೆಗಳು ಸಹಾಯಕ. ಆದ್ದರಿಂದ ಮಕ್ಕಳು ಕ್ರೀಡಾಕೂದಲ್ಲಿ ಪಾಲ್ಗೊಂಡು ನಕ್ಕ-ನಲಿದು, ಕುಣಿದು-ಕುಪ್ಪಳಿಸಿ ಕ್ರೀಡಾಮನೋಭಾವ ಪ್ರದರ್ಶಿಸಬೇಕು ಎಂದರು. ತಾಲ್ಲೂಕುದೈಹಿಕ ಶಿಕ್ಷಣ ಪರಿವೀಕ್ಷಕಿ ಪಂಚಾಕ್ಷರಿಎಸ್. ನಂದೀಶ ಮುಖ್ಯಅತಿಥಿಯಾಗಿ ಮಾತನಾಡಿ, ನಿಜ ಜೀವನದ ಪಾಠಕಲಿಯಲು ಕ್ರೀಡೆಗಳು ಸಹಾಯಕ. ಆದ್ದರಿಂದಸೋಲು-ಗೆಲುವನ್ನುಸಮನಾಗಿ ಸ್ವೀಕರಿಸಬೇಕು ಎಂದರು.

ದೈಹಿಕ ಶಿಕ್ಷಣ ಶಿಕ್ಷಕರ ಸಂಘದತಾಲ್ಲೂಕುಘಟಕದಅಧ್ಯಕ್ಷ ಸುರೇಶ ಬೋಸ್ಲೆಮಾತನಾಡಿ, ಕ್ರೀಡೆಗಳಲ್ಲಿ ಸೋತವರು ಮನೋಸ್ಥೈರ್ಯ ಕಳೆದುಕೊಳ್ಳದೆ ಮುಂದಿನ ಕ್ರೀಡಾಕೂಟಕ್ಕೆಅಣಿಯಾಗಬೇಕುಎಂದರು.



ಕ್ಷೇತ್ರ ಸಮನ್ವಯಾಧಿಕಾರಿಕಾಡೇಶಕೋಲೂರಕ್ರೀಡಾಜ್ಯೋತಿಯನ್ನು ಬೆಳಗಿಸಿದರು.ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಬಿ. ಬೆಳ್ಳಿಕಟ್ಟಿ, ಶಿಕ್ಷಣಾಧಿಕಾರಿಗಳ ಸಂಘದಅಧ್ಯಕ್ಷ ಭೂಷಣ ಪತ್ತಾರ, ಸಿಆರ್‌ಪಿ ಎಂ.ಎಸ್. ನಾವಿ, ಪ್ರೌಢಶಾಲಾ ಸಹಶಿಕ್ಷಕರ ಸಂಘದಅಧ್ಯಕ್ಷ ನರಸಿಂಹ ಕಲ್ಲೋಳ್ಳಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಉಪಾಧ್ಯಕ್ಷಎನ್.ಎಲ್. ಮಿರ್ಜಿ, ಸಂಸ್ಥೆಯಅಧ್ಯಕ್ಷಡಾ. ಗಿರೀಶಕಡ್ಡಿಇದ್ದರು. ಸಾಕ್ಷಿ ಸಂಕ್ರಾವತ ವಚನ ಪ್ರಾರ್ಥನೆಗೀತೆ ಹಾಡಿದರು.ಪ್ರಾಚಾರ್ಯಡಾ.ಟಿ.ಪಿ.ಗಿರಡ್ಡಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.ಉಪನ್ಯಾಸಕ ಮೌನೇಶ ಬಡಿಗೇರ ನಿರೂಪಿಸಿದರು. ಸಂಸ್ಥೆಯ ಆಡಳಿತಾಧಿಕಾರಿ ಪ್ರೊ.ಬಸವರಾಜಕಡ್ಡಿ ವಂದಿಸಿದರು.

# ಶಿಸ್ತುಬದ್ಧ ಅಧ್ಯಯನ ಅಗತ್ಯ: ಢವಳೇಶ್ವರ




**ಮಹಾಲಿಂಗಪುರ :** ಸರ್ಕಾರದ ಅನುದಾನ ಇಲ್ಲದೆ ಶಾಲೆ, ಕಾಲೇಜುಗಳನ್ನು ನಡೆಸುವುದು ಬಹು ದೊಡ್ಡ ಜವಾಬ್ದಾರಿಯಾಗಿದೆ ಎಂದು ಬಾಗಲಕೋಟೆ ವಿಶ್ವವಿದ್ಯಾಲಯದ ಜಮಖಂಡಿ ಕಾಲೇಜು ಅಭಿವೃದ್ಧಿ ಸಮಿತಿ ಸಂಘದ ನಿರ್ದೇಶಕ ಚಿದಾನಂದ ಢವಳೇಶ್ವರ ಹೇಳಿದರು.


ಸಮೀಪದ ರನ್ನಬೆಳಗಲಿ ಪಟ್ಟಣದ ಬಂದಲಕ್ಷ್ಮೀಸಭಾಭವನದಲ್ಲಿ ಹಮ್ಮಿಕೊಂಡ ಬೆಳಗಲಿ ವಿದ್ಯಾವರ್ಧಕ ಸಂಘದ ಎಸ್‌ಜಿಎಂ ಪದವಿ ಪೂರ್ವ ಮತ್ತು ಪದವಿ ಮಹಾವಿದ್ಯಾಲಯದ ಸಾಂಸ್ಕೃತಿಕ, ಕ್ರೀಡಾಕೂಟ ಮತ್ತು ಕಲಾ ಪದವಿ ಕಾಲೇಜ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಎಲ್ಲಿ ಸೃಜನಶೀಲ ಮನಸ್ಸು ಇರುತ್ತವೆಯೋ ಅಲ್ಲಿ ಯಶಸ್ಸು ಹುಡುಕಿಕೊಂಡು ಬರುತ್ತದೆ. ತಿಳಿವಳಿಕೆಯ ಶಿಸ್ತುಬದ್ಧ ಅಧ್ಯಯನದಿಂದ ವಿದ್ಯಾರ್ಥಿಗಳ ಭಾವಿ ಭವಿಷ್ಯ ಉಜ್ವಲವಾಗುತ್ತದೆ. ಆ ನಿಟ್ಟಿನಲ್ಲಿ ಹಿರಿಯರ ಶ್ರಮ ವ್ಯರ್ಥವಾಗದಂತೆ ಈ ಶಿಕ್ಷಣ ಸಂಸ್ಥೆಯಲ್ಲಿ ಅಭ್ಯಸಿಸಿ ಹೆಚ್ಚಿನ ಸಾಧನೆ ಮಾಡಿ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಊರಿನಕೀರ್ತಿ ಹೆಚ್ಚುವಂತೆ ಪರಿಶ್ರಮ ಪಡಬೇಕುಎಂದರು.

ಸಂಘದ ಕಾರ್ಯದರ್ಶಿ ಪಂಡಿತ ಪೂಜಾರ, ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಧರೆಪ್ಪ ಸಾಂಗ್ಲಿಕರ ಮಾತನಾಡಿದರು.ಚಿಮ್ಮಡ ವಿರಕ್ತಮಠದ ಪ್ರಭು ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿದರು.

ದುಂಡಪ್ಪ ಭರಮನಿ, ಚಿಕ್ಕಪ್ಪ ನಾಯಕ, ಸಿದ್ದುಗೌಡ ಪಾಟೀಲ, ಹಣಮಂತ ಕೊಣ್ಣೂರ, ಪರಮಾನಂದ ಆಲಗೂರ, ಗುರುನಾಥ ಹಿಪ್ಪರಗಿ, ಸದಾಶಿವ ಸಂಕ್ರಟ್ಟಿ, ಶ್ರೀಮಂತ ಒಂಟಗೋಡಿ, ಶಿವಪ್ಪ ಕೊಣ್ಣೂರ, ಚಿನ್ನಪ್ಪ ಪೂಜೇರಿ ಸೇರಿದಂತೆ ಹಲವರು ಇದ್ದರು.

# ಆಕಾಶವನ್ನು ಮುಟ್ಟಿದ ಭಾರತದ ಮೊದಲ ಮಾನವರಹಿತ ವಿಮಾನ ಎಫ್ಡಬ್ಲ್ಯೂಡಿ 200ಬಿ



**ಬೆಂಗಳೂರು :** ಬೆಂಗಳೂರಿನ ಫಾರ್ಚೂನ್ ಪಾರ್ಕ್ ಜೆಪಿ ಸೆಲೆಸ್ಟಿಯಲ್ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಫ್ಲೈಯಿಂಗ್ ವೆಡ್ಜ್ ಡಿಫೆನ್ಸ್ ಅಂಡ್ ಏರೋಸ್ಪೇಸ್ (ಎಫ್ಡಬ್ಲ್ಯೂಡಿಎ) ಭಾರತದ ಮೊದಲ ಸ್ವದೇಶಿ ಮಾನವರಹಿತ ಬಾಂಬರ್ ವಿಮಾನ ಎಫ್ಡಬ್ಲ್ಯೂಡಿ 200 ಬಿ ಯಶಸ್ವಿ ಹಾರಾಟವನ್ನು ಹೆಮ್ಮೆಯಿಂದ ಘೋಷಿಸಿದೆ.ಇದು ದೇಶದ ರಕ್ಷಣಾ ಕ್ಷೇತ್ರದಲ್ಲಿ ಐತಿಹಾಸಿಕ ಮೈಲಿಗಲ್ಲಾಗಿದೆ. ಮೊದಲ ವಿಮಾನವನ್ನು ವೀಡಿಯೊ ಸ್ಕ್ರೀನಿಂಗ್ ಮೂಲಕ ಎಲ್ಲರಿಗೂ ಪ್ರದರ್ಶಿಸಲಾಯಿತು.

ಆಧುನಿಕ ರಕ್ಷಣಾ ಸಾಮರ್ಥ್ಯಗಳೊಂದಿಗೆ ಭಾರತವನ್ನು ಸಜ್ಜುಗೊಳಿಸುವ ಯುಎವಿಯನ್ನು ಮಧ್ಯಮ ಎತ್ತರ ಎಂದು ವರ್ಗೀಕರಿಸಲಾಗಿದೆ.15000 ಅಡಿ, ಲಾಂಗ್ ಎಂಡ್ಯೂರೆನ್ಸ್ (ಪುರುಷ) ಮಾನವರಹಿತ ಯುದ್ಧ ವೈಮಾನಿಕ ವಾಹನ (ಯುಸಿಎವಿ) . ಖಿಜ ಈಘಿ 200 ಬಿ ಕಣ್ಗಾವಲು ಆಪ್ಟಿಕಲ್ ಪೇಲೋಡ್ಗಳನ್ನು ಮತ್ತು ವಾಯು ದಾಳಿಗಾಗಿ ಕ್ಷಿಪಣಿ ತರಹದ ಶಸ್ತ್ರಾಸ್ತ್ರಗಳನ್ನು ಹೊಂದಿದೆ ಮತ್ತು ಬಾಂಬ್ ದಾಳಿ. ವರ್ಗೀಕೃತ ಸ್ಥಳದಲ್ಲಿ ಯಶಸ್ವಿಯಾಗಿ ಪರೀಕ್ಷಿಸಲ್ಪಟ್ಟ ಎಫ್ಡಬ್ಲ್ಯೂಡಿ 200 ಬಿ ಯ ಮೊದಲ ಹಾರಾಟವು ನೆರವೇರಿಕೆಯನ್ನು ಪ್ರತಿನಿಧಿಸುತ್ತದೆ.

ಈ ಸಂದರ್ಭದಲ್ಲಿ ಮಾತನಾಡಿದ ಎಫ್ಡಬ್ಲ್ಯೂಡಿಎ ಸ್ಥಾಪಕ ಮತ್ತು ಸಿಇಓ ಸುಹಾಸ್ ತೇಜಸ್ಕಂದ, "ಭಾರತವು ದೇಶವಾಗಿದೆ. ಕಳೆದ ಐದು ವರ್ಷಗಳಲ್ಲಿ ವಿಶ್ವದ ಅತಿದೊಡ್ಡ ಶಸ್ತ್ರಾಸ್ತ್ರ ಆಮದುದಾರ, ಮತ್ತು ಆಗಾಗ್ಗೆ ವೆಚ್ಚದ ಹತ್ತು ಪಟ್ಟು ಪಾವತಿಸಿದೆ ಯುಎಸ್ ಮತ್ತು ಇಸ್ರೇಲ್ ನಂತಹ ದೇಶಗಳಿಂದ ಮಿಲಿಟರಿ ತಂತ್ರಜ್ಞಾನಕ್ಕಾಗಿ. ಈಘಿ ಯ ಯಶಸ್ವಿ ಹಾರಾಟ 200 ಬಿ ನಮ್ಮ ಕಂಪನಿಯ ಸಾಧನೆ ಮಾತ್ರವಲ್ಲ, ಇಡೀ ರಾಷ್ಟ್ರದ ಗೆಲುವು" ಎಂದರು.

"ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡುವ ಈ ಹೆಗ್ಗುರುತು ಸಾಧನೆಯು ವರ್ಷಗಳ ನಿರಂತರ ಪ್ರಯತ್ನಗಳನ್ನು ಅನುಸರಿಸುತ್ತದೆ.ಈ ಹಿಂದೆ ಅಡ್ಡಿಯಾಗಿದ್ದ ಸವಾಲುಗಳನ್ನು ನಿವಾರಿಸಲು ದೇಶೀಯವಾಗಿ ಯುಎವಿ ವಿರುದ್ಧ ಹೋರಾಡಿ ಪ್ರಮುಖ ರಕ್ಷಣಾ ಸಂಸ್ಥೆಗಳಿಂದ ಇದೇ ರೀತಿಯ ಉಪಕ್ರಮಗಳು" ಎಂದು ಸುಹಾಸ್ ತೇಜಸ್ಕಂದ ಹೇಳಿದರು.

ಇನ್ನು ವಿಮಾನಗಳ ವಾಯುಬಲವಿಜ್ಞಾನ ವಿನ್ಯಾಸ, ಏರ್ ಫ್ರೇಮ್, ಪ್ರೊಪಲ್ಷನ್ ವ್ಯವಸ್ಥೆಗಳು, ನಿಯಂತ್ರಣ ವ್ಯವಸ್ಥೆಗಳು, ಎಲೆಕ್ಟ್ರಾನಿಕ್ಸ್ 12,000 ಚದರ ಅಡಿಯ ಎಫ್ಡಬ್ಲ್ಯೂಡಿಎಯ ಅತ್ಯಾಧುನಿಕ ಉತ್ಪಾದನಾ ಸೌಲಭ್ಯದಲ್ಲಿ ಭಾರತದಲ್ಲಿ ತಯಾರಿಸಲಾಗಿದೆ ಮಾಹಿತಿಯ ಪ್ರಕಾರ, ಎಫ್ ಡಬ್ಲ್ಯುಡಿ 200 ಬಿ 5 ಮೀಟ-ರ್ (16.4 ಅಡಿ) ರೆಕ್ಕೆಗಳನ್ನು ಹೊಂದಿದೆ. ಉದ್ದ 3.5 ಮೀಟರ್ (12.1 ಅಡಿ), ಇದು ಕಾಂಪ್ಯಾಕ್ಟ್ ಆದರೆ ಶಕ್ತಿಯುತವಾಗಿದೆ. ಅದರ ಗಾತ್ರದ ಹೊರತಾಗಿಯೂ, ವಿಮಾನ 102 ಕೆಜಿ ತೂಕವನ್ನು ಹೊಂದಿದೆ.30 ಕೆಜಿ ಸಾಮರ್ಥ್ಯ, ಇದು ನಿಖರವಾಗಿ ಮಹತ್ವದ ಕಾರ್ಯಾಚರಣೆಗಳನ್ನು ನಡೆಸುವ ಸಾಮರ್ಥ್ಯವನ್ನು ಹೊಂದಿದೆ.

12,000 ಅಡಿ ಎತ್ತರದಲ್ಲಿ ಕಾರ್ಯನಿರ್ವಹಿಸುತ್ತದೆ ಮತ್ತು 15,000 ಅಡಿಗಳ ಸಂಪೂರ್ಣ ಸೀಲಿಂಗ್ ಅನ್ನು ತಲುಪುತ್ತದೆ. ಎಫ್ ಡಬ್ಲ್ಯೂಡಿ 200ಬಿ ಕಾರು ಗಂಟೆಗೆ 152 ಕಿ.ಮೀ ವೇಗದಲ್ಲಿ ಹಾರಬಲ್ಲದು. ಅದು ಕಾರ್ಯಾಚರಣೆಯ ಬಹುಮುಖತೆಯನ್ನು ಕೇವಲ 300 ಮೀಟರ್ ರನ್ ವೇ ಅಗತ್ಯದಿಂದ ಮತ್ತಷ್ಟು ಎತ್ತಿ ತೋರಿಸಲಾಗಿದೆ, ಇದು ಚಿಕ್ಕ ಏರ್ ಸ್ಟ್ರಿಪ್ ಗಳಿಂದ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುತ್ತದೆ.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State